ಸಂಪುಟ : 13 Volume | ಸಂಚಿಕೆ : 245 Issue | ಪುಟಗಳು : 08 Pages | ಶನಿವಾರ 15 ನವೆಂಬರ 2025 | ₹2 | PRGINO. 120927(RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಆತ್ಮಸಾಕ್ಷಿ ವಿಷಯದಲ್ಲಿ ಬಹುಮತದ ಯಾವ ಕಾನೂನಿಗೂ ಜಾಗವಿಲ್ಲ.

ಮಹಾತ್ಮ ಗಾಂಧಿ ಜಯಂತಿ

4 ವಿಶ್ವ ಮಧುಮೇಹ ದಿನಾಚರಣೆ

2 ಮತದಾರರ ತೀರ್ಪು ಸ್ವೀಕಾರ

8 ಬಿಹಾರ ಫಲಿತಾಂಶ: ದೇಶದ ಅಭಿವೃದ್ಧಿ ಪರ

3 ಸಹಕಾರ ಸಂಘಗಳಿಗೆ ಲ್ಯಾಪ್ ಟಾಪ್

## ಪೂರ್ವ ನಿಯೋಜಿತ ಕೃತ್ಯ



**ಮಲ್ಲಮ್ಮ ನುಡಿ ವಾರ್ತೆ**

**ಬಾಗಲಕೋಟೆ:** ಗುರುವಾರ ಜಿಲ್ಲೆಯ ಸಮೀರವಾಡಿಯ ಗೋದಾವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿರುವ ಘಟನೆ ಮೇಲ್ನೋಟಕ್ಕೆ ಪೂರ್ವನಿಯೋಜಿತ ಕೃತ್ಯ ಎಂಬ ಶಂಕೆ ವ್ಯಕ್ತವಾಗಿದೆ ಎಂದು ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಆರ್. ಹಿತೇಂದ್ರ ಹೇಳಿದರು. ಶುಕ್ರವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೃತ್ಯವನ್ನು ರೈತರು ಮಾಡಿಲ್ಲ. ಕಿಡಿಗೇಡಿಗಳು ಮಾಡಿದ್ದಾರೆ. ಈ ಪ್ರಕರಣ ಸಂಬಂಧ 15 ಜನರ ಮೇಲೆ ಶಂಕೆಯಿದೆ. ಸೂಕ್ತ ತನಿಖೆಕೈಗೊಂಡು ತಪ್ಪಿತಸ್ಥರನ್ನು ಪತ್ತೆ ಮಾಡಲಾಗುವುದು ಎಂದರು.

## ಸಹಕಾರ ಕ್ಷೇತ್ರ ಗಟ್ಟಿಯಾದರೆ ಆರ್ಥಿಕ ಸಾಮಾಜಿಕ ಚೈತನ್ಯ ಹೆಚ್ಚಾಗುತ್ತದೆ: ಸಿ.ಎಂ

**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು:** ರಾಜ್ಯ ಸಹಕಾರ ಸಂಘದಿಂದ 37 ಲಕ್ಷ ರೈತರಿಗೆ 27 ಸಾವಿರ ಕೋಟಿ ರೂ.ಗಳ ಸಾಲ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಹಕಾರ ಇಲಾಖೆಯ ವತಿಯಿಂದ ಬೆಂಗಳೂರು ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ-2025 ಕಾರ್ಯಕ್ರಮದಲ್ಲಿ ಇಂದು ನಿಧನರಾದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಒಂದು ನಿಮಿಷದ ಮೌನಾಚರಿಸಿ ಸಂತಾಪ ಸೂಚಿಸಿದ ನಂತರ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ, ಸಹಕಾರ ಪಿತಾಮಹರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ, ಮಾತನಾಡಿದ ಮುಖ್ಯಮಂತ್ರಿಗಳು, ರೂ. 5.00 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ವಿತರಿಸಲಾಗುವುದು. ರೂ.10.00 ಲಕ್ಷದವರೆಗೆ ಶೇ.3 ರ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಇದೆಲ್ಲಾ ಸಾಧ್ಯವಾದದ್ದು ಸಹಕಾರ ಸಂಘದಿಂದ ಎಂದರು.

ಸಹಕಾರ ಕ್ಷೇತ್ರ ಗಟ್ಟಿಯಾದರೆ ಆರ್ಥಿಕ, ಸಾಮಾಜಿಕ ಚೈತನ್ಯ ಹೆಚ್ಚಾಗುತ್ತದೆ. ಗ್ರಾಮೀಣ ಭಾರತದ ಪ್ರಗತಿಗಾಗಿ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂ ಅವರು ಸಹಕಾರ ಕ್ಷೇತ್ರಕ್ಕೆ ಚೈತನ್ಯ ನೀಡಿದರು. ಯಾವುದೇ ಗ್ರಾಮ ಅಭಿವೃದ್ಧಿಯಾಗಬೇಕಾದರೆ 2ನೇ ಪುಟನೋಡಿ

## ಬಿಹಾರ ಗೆದ್ದಾಯ್ತು ಈಗ ಬಿಜೆಪಿ ಚಿತ್ತ ಬಂಗಾಳದತ್ತ

**ಮಲ್ಲಮ್ಮ ನುಡಿ ವಾರ್ತೆ**

**ಪಾಟ್ನಾ:** ಬಿಹಾರ ಚುನಾವಣೆ ಆಯ್ತು ಮುಂದೆ ಬಂಗಾಳದಲ್ಲೂ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಭವಿಷ್ಯ ನುಡಿದಿದ್ದಾರೆ. ಮಾಧ್ಯಮದ ಜೊತೆ ಮಾತನಾಡಿದ ಅವರು, ಬಿಹಾರದ ನಾಗರಿಕರು ಅರಾಜಕತೆ ಹಾಗೂ ಭ್ರಷ್ಟ ನಾಯಕತ್ವವನ್ನು ನೇರವಾಗಿ ತಿರಸ್ಕರಿಸುತ್ತಾರೆ. ಹೀಗಾಗಿ ನಾನು ಸ್ಪಷ್ಟವಾಗಿ ಹೇಳ್ತಿನಿ, ಬಿಹಾರದಲ್ಲಿ ಈ ಬಾರಿ ಗೆಲುವು ಖಚಿತ ಮುಂದೆ ಬಂಗಾಳದ ಸರದಿ. ನಾವು ಬಂಗಾಳದಲ್ಲಿಯೂ ಗೆಲುವು ಸಾಧಿಸುತ್ತೇವೆ ಎಂದಿದ್ದಾರೆ. ಈಗಿರುವ ಸರ್ಕಾರ ಅವ್ಯವಸ್ಥೆಯಿಂದ ಕೂಡಿದೆ. ಹೀಗಾಗಿ ಅಲ್ಲಿನ ಜನರು ಅಂತಿಮವಾಗಿ ಉತ್ತಮ ನಾಯಕತ್ವವನ್ನು ಆಯ್ಕೆ ಮಾಡುತ್ತಾರೆ ಎಂದು ತಿಳಿಸಿದ್ದಾರೆ. ಬಿಹಾರ ಚುನಾವಣೆಯ ಫಲಿತಾಂಶವು, ಕಾನೂನು ಬಾಹಿರವಾಗಿರುವವರನ್ನು ತಿರಸ್ಕರಿಸಿ, ಅಭಿವೃದ್ಧಿಯತ್ತ ಸಾಗುವವರನ್ನು ಆಯ್ಕೆಮಾಡಿದೆ ಎಂಬುವನ್ನು ಪ್ರತಿಬಿಂಬಿಸುತ್ತದೆ. ನಾವು ಪ್ರಗತಿಯ ಪಥದತ್ತ ಸಾಗುತ್ತೇವೆ, ಕಳಪೆ ವಿವಿಗಳನ್ನು ಬದಲಾಯಿಸಿ, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯುತ್ತೇವೆ ಎಂದು ತಿಳಿಸಿದ್ದಾರೆ.

ಇಂದಿನ ಯುವಕರು ಬಿಹಾರದಲ್ಲಿ ಭ್ರಷ್ಟ ನಾಯಕರ ಆಳ್ವಿಕೆಯನ್ನು ನೋಡಲು ಬಯಸುವುದಿಲ್ಲ. ಫಲಿತಾಂಶದ ಬಳಿಕ ನಿತೀಶ್ ಕುಮಾರ್ ಅವರ ಅಡಿಯಲ್ಲಿ ಸರ್ಕಾರ ರಚನೆಯಾಗಲಿದೆ, 2ನೇ ಪುಟನೋಡಿ



ಅರಣ್ಯ ಇಲಾಖೆಯ ಸಚಿವನಾಗಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರೊಂದಿಗೆ ನನಗಿದ್ದ ಒಡನಾಟ ಅಪರೂಪದ ಅನುಭವ. ಅವರು ಮಮತೆಯಿಂದ ಬೆಳೆಸಿದ ಮರಗಳಂತೆ, ನಮ್ಮಲ್ಲಿ ಹಸಿರು ಸಂರಕ್ಷಣೆಯ ಬದ್ಧತೆಯನ್ನು ಬೆಳೆಸಿದರು. ನಾವು ಅವರು ತೋರಿದ ದಾರಿಯಲ್ಲೇ ನಡೆದು, ಹಸಿರು ಭಾರತದ ಕನಸನ್ನು ಸಾಕಾರಗೊಳಿಸುವುದು ನಮ್ಮ ಸದಾಕಾಲದ ಧ್ಯೇಯ. ಅಗಲಿದ ಈ ಹಿರಿಯ ಆತ್ಮಕ್ಕೆ ನಾನು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ಓಂ ಶಾಂತಿ

**ಈಶ್ವರ ಖಂಡ್ರೆ**
**ಅರಣ್ಯ ಮತ್ತು ಪರಿಸರ ಸಚಿವರು ಕರ್ನಾಟಕ ಸರ್ಕಾರ**

# ಶಿಕ್ಷಣದಿಂದ ಮಾತ್ರ ಬದಲಾವಣೆ

## ನೆಹರೂ ಅವರು ಮಕ್ಕಳ ಜೊತೆಗೆ ಶಿಕ್ಷಣಕ್ಕೂ ಅಷ್ಟೇ ಮಹತ್ವ ನೀಡುತ್ತಿದ್ದರು: ಸಿ.ಎಂ



**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು :** ದೇಶ ಉತ್ತಮವಾಗಿ ಮತ್ತು ಆರೋಗ್ಯಕರವಾಗಿ ಬೆಳೆಯಬೇಕಾದರೆ ಶಿಕ್ಷಣ ಬಹಳ ಮುಖ್ಯ. ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ತರಲಾಗುವುದು. ಇದನ್ನು ಅರಿತ ನಮ್ಮ ಪ್ರಪ್ರಥಮ ಪ್ರಧಾನಮಂತ್ರಿಗಳಾದ ಜವಹಾರಲಾಲ್ ನೆಹರು ಅವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದರು. ದೇಶದ ಭವಿಷ್ಯ ರೂಪಿತ ಆಗುವುದು ವೈಚಾರಿಕ-ವೈಜ್ಞಾನಿಕ ಮನೋಭಾವದ ಮಕ್ಕಳಿಂದ. ಆದ್ದರಿಂದ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದಲೇ ಮೌಢ್ಯ, ಕಂದಾಚಾರದಿಂದ ದೂರ ಉಳಿಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಇಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಭಾರತದ ಪ್ರಪ್ರಥಮ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರಲಾಲ್ ನೆಹರು ಅವರ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದ ಮಕ್ಕಳ ದಿನಾಚರಣೆ ಮತ್ತು ಪೋಷಕರ-ಶಿಕ್ಷಕರ ಮಹಾಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳು, ನೆಹರೂ ಅವರು ಮಕ್ಕಳನ್ನು ಹೆಚ್ಚು ಪ್ರೀತಿಸುತ್ತಿದ್ದರು. ಮಕ್ಕಳೇ ಭಾರತದ ಭವಿಷ್ಯ ಎನ್ನುವ ದೂರದೃಷ್ಟಿ ಹೊಂದಿದ್ದ ನೆಹರೂ ಅವರು ಮಕ್ಕಳಲ್ಲಿ ವೈಜ್ಞಾನಿಕ ಮನೋಧರ್ಮ ರೂಪಿಸುವ ಶಿಕ್ಷಣಕ್ಕೆ ಒತ್ತು ನೀಡಿದ್ದರು. ಅದರಂತೆಯೇ ನಮ್ಮ ಸರ್ಕಾರ ಕೂಡ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಿದ್ದು, 2025-26ನೇ ಸಾಲಿನ ಆಯವ್ಯಯದಲ್ಲಿ 65000 ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ನೀಡುತ್ತಿದೆ ಎಂದರು. ನೆಹರೂ ತಮ್ಮ ಯೌವ್ವನದ 3200 ಕ್ಕೂ ಹೆಚ್ಚು ದಿನಗಳನ್ನು ಜೈಲಿನಲ್ಲಿ ಕಳೆದ ಹೋರಾಟಗಾರ. ಅತೀ ಶ್ರೀಮಂತ ಕುಟುಂಬದಿಂದ ಬಂದಿದ್ದರೂ ದೇಶದ ಸ್ವಾತಂತ್ರ್ಯಕ್ಕಾಗಿ ಸೆರೆಮನೆ ಸೇರಿದರು. ದೇಶದ ಪ್ರಧಾನಿಯಾಗಿ ಕೃಷಿ, ವಿಜ್ಞಾನ, ನೀರಾವರಿ, ತಂತ್ರಜ್ಞಾನ ಸೇರಿ ದೇಶದ ಸಮಗ್ರ ಅಭಿವೃದ್ಧಿಗೆ ಅಡಿಪಾಯ ಹಾಕಿದರು.

2ನೇ ಪುಟನೋಡಿ

### ದೂರ ದೃಷ್ಟಿ ಜನಪರ ಕಾಳಜಿಯ ಅಪರೂಪದ ನಾಯಕ

## ನೇರ ನಡೆ ನುಡಿಯ ರಾಜಕಾರಣಿ ದಿ.ಬಾಪುಗೌಡ ದರ್ಶನಾಪುರ

**ಸಂತೋಷ ಸತ್ಯಂಪೇಟೆ**

**ಮಲ್ಲಮ್ಮ ನುಡಿ ವಾರ್ತೆ**

**ಶಹಾಪುರ:** ಹಳ್ಳಿಯ ಕೃಷಿಕ ಮನೆತನದಿಂದ ವಿಧಾನಸಭೆಯ ರಾಜಕಾರಣದವರೆಗೂ ಹೆದ್ದಾರಿಯನ್ನು ನಿರ್ಮಾಣ ಮಾಡಿಕೊಂಡು ಜನಮುಖಿ ರಾಜಕಾರಣಿಯಾಗಿ ಹೈದ್ರಾಬಾದ ಕರ್ನಾಟಕ ಧೀಮಂತ ನಾಯಕರಂದೆ ಗುರುತಿಸಿಕೊಂಡವರು ದಿ.ಬಾಪುಗೌಡ ದರ್ಶನಾಪುರ. ದೂರದೃಷ್ಟಿ ಮತ್ತು ಜನಪರ ಕಾಳಜಿಯಿಂದ ಎಲ್ಲಾ ವರ್ಗದ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಶಹಪೂರ ತಾಲ್ಲೂಕಿನ ದರ್ಶನಾಪುರ ಗ್ರಾಮದ ರಾಯಪ್ಪಗೌಡ ಮತ್ತು ತಿಪ್ಪಮ್ಮಗೌಡ್ತಿ ದಂಪತಿಗಳ ಉದರದಲ್ಲಿ 1922 ರಲ್ಲಿ ಜನಿಸಿದರು. ಸ್ವಸಾಮರ್ಥ್ಯದಿಂದ ತಾಲೂಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಸಕ್ರೀಯ ರಾಜಕೀಯ ಜೀವನ ಆರಂಭಿಸಿದ ಬಾಪುಗೌಡರು ಶಿಕ್ಷಣ ಕ್ಷೇತ್ರದಲ್ಲಿಯೂ ಉನ್ನತ 2ನೇ ಪುಟನೋಡಿ

### ಶಿಕ್ಷಣ ಪ್ರೇಮಿ ಬಾಪುಗೌಡರು



ಯಾವತ್ತೂ ಸರ್ವಾಂಗಿಣ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದ ದರ್ಶನಾಪೂರ ರವರು ಶಹಾಪುರ ಚಿತ್ರಣ ಬದಲಾವಣೆಗೆ ಬಾಪುಗೌಡರ ಸಾಕಷ್ಟು ಶ್ರಮವಿದೆ ಎಂದೆ ಹೇಳಬಹುದು. ಶಿಕ್ಷಣಪ್ರೇಮಿ ಮತ್ತು ಶಿಕ್ಷಣದ ಚಿಂತಕರಾಗಿ 1967 ರಲ್ಲಿಯೇ ಚರಬಸವೇಶ್ವರ ವಿದ್ಯಾವರ್ದಕ ಸಂಸ್ಥೆಯನ್ನು ಹುಟ್ಟುಹಾಕಿದರು. ಗುಲ್ಬರ್ಗಾ ವಿಶ್ವ ವಿದ್ಯಾಲಯ ಮತ್ತು ಹೈಕ ಶಿಕ್ಷಣ ಸಂಸ್ಥೆಯ ಸ್ಥಾಪಿಸುವಲ್ಲಿ ಬೆನ್ನೇಲುಬಾಗಿ ನಿಂತಿದ್ದರು. ಹೈಕ ಪ್ರದೇಶದ ರಾಜಕೀಯ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿದ ಬಾಪುಗೌಡರು 1988 ನವ್ಹೇಂಬರ 15 ರಂದು ಇಲ್ಲವಾದರೂ. ಅವರ ಸಾಧನೆಗಳು ಅಮರತ್ವವನ್ನು ಸಾರುತ್ತಿವೆ ಅವರು ಹಾಕಿಕೊಟ್ಟ ಮಾರ್ಗವನ್ನು ಇಂದಿನ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶರಣಬಸಪ್ಪಗೌಡ ದರ್ಶನಾಪುರ ಇಡೀ ದರ್ಶನಾಪೂರ ಮನೆತನದವರು ಪಾಲಿಸುತಿದ್ದಾರೆಂದರೆ.

## ಸಾಲುಮರದ ತಿಮಕ್ಕ ಇನ್ನಿಲ್ಲ

**ಮಲ್ಲಮ್ಮ ನುಡಿ ವಾರ್ತೆ**

**ಬೆಂಗಳೂರು :** ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸಾಲು ಮರದ ತಿಮಕ್ಕ (114) ಅವರು ಇಂದು ಪರಿಸರದಲ್ಲಿ ಲೀನವಾಗಿದ್ದಾರೆ. ವೃಕ್ಷಮಾತೆ ತಿಮಕ್ಕ ಅವರು ವಯೋಸಹಜ ಕಾಯಿಲೆಯಿಂದಾಗಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನಿಧನರಾಗಿದ್ದಾರೆ. ಉಸಿರಾಟದ ಸಮಸ್ಯೆಯಿಂದ ನವೆಂಬರ್ ಎರಡರಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಇಂದು ಮಧ್ಯಾಹ್ನ ಚಿಕಿತ್ಸೆ ಫಲಕಾರಿಯಾಗದೇ ಇಹಲೋಕ ತ್ಯಜಿಸಿದ್ದಾರೆ.

ಮರಗಳನ್ನು ನೆಟ್ಟು ಪೋಷಿಸುವ ಕಾರ್ಯಕ್ಕಾಗಿ 2019 ರಲ್ಲಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಅನಕ್ಷರಸ್ಥರಾಗಿದ್ದರೂ ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಕಾರ್ಯಮಾಡಿದ್ದಕ್ಕಾಗಿ ಕರ್ನಾಟಕ 2ನೇ ಪುಟನೋಡಿ

37ನೇ ಪುಣ್ಯ ಸ್ಮರಣೆ



ಅಭಿವೃದ್ಧಿ ಹರಿಕಾರರು, ನೀರಾವರಿ ಯೋಜನೆ ರೂವಾರಿ
ಜನಪ್ರಿಯ ನಾಯಕರಾದ
ದಿ. ಶ್ರೀ ಬಾಪುಗೌಡ ದರ್ಶನಾಪುರ ಅವರ
37ನೇ ಪುಣ್ಯ ಸ್ಮರಣೆ ದಿನಾಂಕ 15.11.2025 ರಂದು ಶನಿವಾರ ಜರಗುವುದು
9.30 ಗಂಟೆಗೆ ಭೀಮರಾಯನಗುಡಿ ವೃತ್ತದಲ್ಲಿರುವ ದಿವಂಗತ ಜನಪ್ರಿಯ ನಾಯಕರಾಗಿರುವ
ಶ್ರೀ ಬಾಪುಗೌಡರ ಪುತ್ತಳಿಗೆ ಮಾಲಾರ್ಪಣೆ ನಂತರ ಸಮಯ 10 ಗಂಟೆಗೆ
ಶ್ರೀ ಚರಬಸವೇಶ್ವರ ಪ್ರೌಢಶಾಲೆ ಆವರಣದಲ್ಲಿ ಸ್ಮರಣೋತ್ಸವ ಕಾರ್ಯಕ್ರಮ ನಡೆಯುತ್ತದೆ
ಈ ಕಾರ್ಯಕ್ರಮಕ್ಕೆ ದಿವಂಗತ ಬಾಪುಗೌಡ ದರ್ಶನಾಪುರ ಅವರ
ಅನುಯಾಯಿಗಳು ಹಿರಿಯ ಮುಖಂಡರು,ಯುವ ಮುಖಂಡರು, ಕಾರ್ಯಕರ್ತರು
ಹೆಚ್ಚಿನ ಜನಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ
ಸರ್ವರಿಗೂ ಹಾರ್ದಿಕ ಸ್ವಾಗತ

ಕುಲ್ದೀಪ್ ಯಾದವ್ ಮದುವೆಗೆ ರಜೆ ಸಮಸ್ಯೆ

# ಸಹಕಾರ ಸಂಘಗಳಿಗೆ ಲ್ಯಾಪ್ ಟಾಪ್ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

**ಲಿಂಗಸೂಗೂರು:** ಪಟ್ಟಣದ ಆರ್ ಡಿ ಸಿ ಸಿ ಬ್ಯಾಂಕ ಲಿಂಗಸೂಗೂರ ಶಾಖೆಯಲ್ಲಿ ಲಿಂಗಸಗೂರು ತಾಲೂಕಿನ ಎಲ್ಲಾ 24 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಆರ್ ಸಿ ಸಿ ಬ್ಯಾಂಕಿನ ನಿರ್ದೇಶಕರು ಹಾಗೂ ವಿಧಾನಪರಿಷತ್ತ ಸದಸ್ಯರಾದ ಶ್ರೀ ಶರಣಗೌಡ ಪಾಟೀಲ ಬಯ್ಯಾಪುರವರು ಲ್ಯಾಪ್ ಟಾಪ್ ವಿತರಿಸಿದರು ನಂತರ ಮಾತನಾಡಿ ಪಾಸ್ ಸಿ ಇ ಒ ಉದ್ದೇಶಿಸಿ ಸಂಘಗಳಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ನಿರ್ವಹಿಸಲು ಹಾಗೂ ರೈತರಿಗೆ ಅನುಕೂಲವಾಗಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಿದರು. ಈ ಸಂದರ್ಭದಲ್ಲಿ ಆರ್ ಡಿಸಿಸಿ ಬ್ಯಾಂಕಿನ ಲಿಂಗಸೂಗುರು ಶಾಖಾ ವ್ಯವಸ್ಥಾಪಕರಾದ ಮಲ್ಲಿಕಾರ್ಜುನ ಪಾಟಿಲ ವೃತ್ತಿ ವೀಕ್ಷಕರಾದ ಶಂಕರಾನಂದ ಶರಣಪ್ಪ ಸಿ ಡಿ ಓ ಗಂಗಾಧರ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಪಾಮಯ್ಯ ಮುರಾರಿ ಟಿಎಪಿಎಂಎಸ್ ಅಧ್ಯಕ್ಷರಾದ ಶಶಿಧರ ಪಾಟೀಲ ಹಾಗೂ ವಿಧಾನ ಪರಿಷತ್ ಆಪ್ತ ಕಾರ್ಯದರ್ಶಿಗಳಾದ ಚೆನ್ನಾರೆಡ್ಡಿ ಬಿರಾದಾರ ತಾಲೂಕಿನ ಎಲ್ಲಾ ಪಾಸ್ ಗಳು ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಸಕ್ರಿಯ ಕ್ಷಯರೋಗ ಪತ್ತೆ ಅಂದೋಲನವನ್ನು ಯಶಸ್ವಿಗೊಳಿಸಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

**ಕಲಬುರಗಿ:** ನ,ಕಲಬುರಗಿಜಿಲ್ಲೆಯಲ್ಲಿ ಇದೇ ನವೆಂಬರ್ 15 ರಿಂದ 30 ವರೆಗೆ ಹಮ್ಮಿಕೊಳ್ಳಲಾದ ಸಕ್ರಿಯ ಕ್ಷಯರೋಗಪತ್ತೆಅಂದೋಲನವನ್ನು ಯಶಸ್ವಿಗೊಳಿಸಬೇಕೆಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಗುರುವಾರ ಕಲಬುರಗಿ ಜಿಲ್ಲಾಧಿಕಾರಿಗಳಕಚೇರಿಸಭಾಂಗಣದಲ್ಲಿ ಜರುಗಿದಜಿಲ್ಲಾಆರೋಗ್ಯಅಭಿಯಾನದ ರಾಷ್ಟ್ರೀಯಆರೋಗ್ಯಕಾರ್ಯಕ್ರಮಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ ಅವರು ಮಾತನಾಡಿ, 2025ರ ಆಗಸ್ಟ್‌ದಿಂದ ಅಕ್ಟೋಬರ್‌ವರೆಗೆ ಜಿಲ್ಲೆಯಲ್ಲಿ ಒಟ್ಟು 11 ತಾಯಿ ಮರಣದ ಪ್ರಕರಣವು ದಾಖಲಾಗಿವೆ ಎಂದು ಸಭೆಗೆ ತಿಳಿಸಿದರು. ಇದಕ್ಕೆಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ತಾಯಿ ಮರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳಬೇಕು. ಇನ್ನು ಮುಂದೆ ಜಿಲ್ಲೆಯಲ್ಲಿ ತಾಯಿ ಮರಣದ ಪ್ರಕರಣವು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮವನ್ನು ವೈದ್ಯರು ಕೈಗೊಳ್ಳುವಂತೆ ಸೂಚಿಸಿದರು.

ಇದೇಸಂದರ್ಭದಲ್ಲಿಜಿಲ್ಲೆಯಾದ್ಯಂತ ನವೆಂಬರ್ 24 ರಿಂದ ಡಿಸೆಂಬರ್ 9 ರವರೆಗೆನಡೆಯುವ ಕುಷ್ಠರೋಗ ಪತ್ತೆ ಹಚ್ಚುವಅಂದೋಲನಕಾರ್ಯಕ್ರಮದ ಹಾಗೂ ತಂಬಾಕು ಮುಕ್ತ ಯುವ ಅಭಿಯಾನ 3.0 ಕಾರ್ಯಕ್ರಮದ ಭಿತ್ತಿ ಪತ್ರವನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದರು.

ಕಾಯಕಲ್ಪ ಕಾರ್ಯಕ್ರಮದಡಿ ಆಯ್ಕೆಯಾದ ಕಲಬುರಗಿ ಜಿಲ್ಲೆಯ ಆರೋಗ್ಯಸಂಸ್ಥೆಗಳವೈದ್ಯಾಧಿಕಾರಿಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಪ್ರಶಸ್ತಿ ಪತ್ರ ವಿತರಣೆ ಮಾಡಿ ಸನ್ಮಾನಿಸಲಾಯಿತು.

ಸಭೆಯಲ್ಲಿ ಆರ್.ಸಿ.ಹೆಚ್.ಓ.ಡಾ. ಸಿದ್ರಾಮಪ್ಪ ಪಾಟೀಲ, ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶಿವಶರಣಪ್ಪ ಭೂಸನೂರ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಚಂದ್ರಕಾಂತ ನರಬೋಳಿ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ವಿವೇಕಾನಂದ ರೆಡ್ಡಿ ಸೇರಿದಂತೆ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಜಿಮ್ಸ್ ಆಸ್ಪತ್ರೆಯ ಮುಖ್ಯಸ್ಥರು, ಸ್ತ್ರೀ-ರೋಗ ಮತ್ತು ಪ್ರಸೂತಿ ತಜ್ಞರು, ಜಿಲ್ಲಾ ತರಬೇತಿ ಕಾರ್ಯಕ್ರಮದ ಪ್ರಾಂಶುಪಾಲರು, ತಾಲೂಕಾ ಆರೋಗ್ಯ ಅಧಿಕಾರಿಗಳು, ಆರೋಗ್ಯ ಸಂಸ್ಥೆಯ ಆಡಳಿತ ವೈದ್ಯಾಧಿಕಾರಿಗಳು ಹಾಗೂ ಇನ್ನಿತರ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.




# ಕಾಂಗ್ರೇಸ್‌ಗೆ ಕಪಾಳಮೋಕ್ಷ ಮಾಡಿದ ಬಿಹಾರ ಜನತೆ : ಭಗವಂತ ಖೂಬಾ

ಮಲ್ಲಮ್ಮ ನುಡಿ ವಾರ್ತೆ

**ಬಿಹಾರ್** ರಾಜ್ಯದ ಜನರು ಭಾರತೀಯ ಜನತಾ ಪಕ್ಷಕ್ಕೆ ಅಭೂತಪೂರ್ವ ಗೆಲುವನ್ನು ತಂದುಕೊಡುವ ಮೂಲಕ ಪ್ರಧಾನಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜಿಯವರ ನಾಯಕತ್ವಕ್ಕೆ ಬಹುಪರಾಕ್ ಹೇಳಿದ್ದಾರೆ ಮತ್ತು ಕಾಂಗ್ರೇಸ್ ಹಾಗೂ ಇಂಡಿ ಮೈತ್ರಿಕೋಟವು ಮಾಡುತ್ತಿರುವ ವೋಟ್ ಚೋರಿ ಅಪಪ್ರಚಾರ, ದೇಶವಿರೋಧಿಗಳಿಗೆ ಕುಮ್ಮಕ್ಕು ನೀಡಿ, ದೇಶದಲ್ಲಿ ಅಸ್ಥಿರತೆ ಉಂಟು ಮಾಡುವ ಪ್ರಯತ್ನಗಳು, ವಿದೇಶಿ ನೆಲದಲ್ಲಿ ಕುಂತು ಭಾರತದ ಬಗ್ಗೆ ಕೀಳಾಗಿ ಮಾತಾಡುವುದು, ಚುನಾವಣೆ ಆಯೋಗಗಳಂತಹ ಸ್ವಾಯತ್ ಸಂಸ್ಥೆಗಳ ವಿರುದ್ದ ಜನರಲ್ಲಿ ಭ್ರಮೆ ಹುಟ್ಟಿಸುವುದು ಮಾಡುತ್ತಿರುವುದಕ್ಕೆ ಕಪಾಳ ಮೋಕ್ಷ ಮಾಡುವ ರೀತಿಯಲ್ಲಿ ಬಿಹಾರ ಜನತೆ ಕಾಂಗ್ರೇಸ್ ಹಾಗೂ ಇಂಡಿ ಮೈತ್ರಿಕೂಟಕ್ಕೆ ಸೋಲಿನ ರುಚಿ ತೋರಿಸಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಅಭಿಪ್ರಾಯ ಪಟ್ಟಿದ್ದಾರೆ.

ಚುನಾವಣೆಯೂ ನಿಷ್ಪಕ್ಷಪಾವಾಗಿ ನಡೆಯಬೇಕೆನ್ನುವ ಉದ್ದೇಶದಿಂದ ಎಸ್.ಐ.ಆರ್ (ವಿಶೇಷ ತಿವ್ರ ಪರಿಷ್ಕರಣೆ) ಎನ್ನುವ ಹೊಸ ನೀತಿ ಹೊರತಂದಿತ್ತು, ಇದರಿಂದ ವೋಟರ್ ಲಿಸ್ಟ್‌ಗಳ ಪರಿಷ್ಕರಣೆಗೊಂಡು, ಅರ್ಹ ಮತದಾರರಿಗೆ ಮಾತ್ರ ಅವಕಾಶ ನೀಡುವ ನಿತಿ ಜಾರಿಗೆ ತಂದು ಬಿಹಾರ್ ಚುನಾವಣೆಯಲ್ಲಿ ಈ ನೀತಿ ಕಾರ್ಯರೂಪಕ್ಕೆ ತಂದಿತ್ತು, ಆದರೆ ಕಾಂಗ್ರೇಸ್ ಇದರ ಬಗ್ಗೆಯು ಅಪಪ್ರಚಾರ ಮಾಡಿತ್ತು, ಆದರೆ ಬಿಹಾರ್ ಜನತೆ ವೋಟ್ ಚೋರಿ ಅಪಪ್ರಚಾರ ಮತ್ತು ಎಸ್.ಐ.ಆರ್ ವಿರೋಧಕ್ಕೆ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಉತ್ತರ ನೀಡಿದೆ. ಬಿಹಾರ್ ಅಭಿವೃದ್ದಿಗೆ ಡಬಲ್ ಇಂಜಿನ ಸರ್ಕಾರದಿಂದ ಸಾಧ್ಯ ಎಂಬದನ್ನು ಅರಿತು ಜನತೆ ಎನ್.ಡಿ.ಎಗೆ ಬಹುಮತ ನೀಡಿ, ಲಾಲೂಪ್ರಸಾದ ಯಾದವರವರ ಜಂಗಲರಾಜ್ ಆಡಳಿತಕ್ಕೆ ಅಧಿಕಾರದಿಂದ ತುಂಬಾ ದೂರ ಇಟ್ಟು, ದೇಶಕ್ಕೆ ಬಿಜೆಪಿ ಪಕ್ಷದ ಆಡಳಿತ ಅವಶ್ಯಕವಾಗಿದೆ ಎಂದು ನಿರೂಪಿಸಿದ್ದಾರೆ ಎಂದಿದ್ದಾರೆ.

ರಾಜ್ಯದಲ್ಲಿಯೂ ಕಾಂಗ್ರೇಸ್ ಸರ್ಕಾರದ ಭ್ರಷ್ಟಚಾರ, ದುರಾಡಳಿತ ಹೆಚ್ಚಾಗಿದೆ, ಸರ್ಕಾರ ಎಲ್ಲಾರಂಗಗಳಲ್ಲಿ ವಿಫಲವಾಗಿದೆ, ರಾಜ್ಯದ ಜನರು ಸುಳ್ಳುಗ್ಯಾರಂಟಿಗಳಿಂದ ಬೆಸತ್ತಿದ್ದಾರೆ, ರೈತರ ಹೊರಾಟಗಳು ದಿನೆ ದಿನೆ ಹೆಚ್ಚಾಗುತ್ತಿವೆ, ಸರ್ಕಾರದ ವಿರುದ್ದ ಜನರು ತಿರುಗಿಬಿಳ್ತಿದ್ದಾರೆ, ಕಾಡುಗಳ್ಳ ವಿರಪ್ಪನ ಕಾಂಗ್ರೆಸ್ ಸಚಿವರುಗಳಿಗಿಂತ ಉತ್ತಮವಾಗಿದ್ದ ಎಂದು ರೈತರು ಸಚಿವರ ಮುಂದೆಯೇ ಮುಖಕ್ಕೆ ಹೊಡೆದಂತೆಹೇಳುತ್ತಿದ್ದಾರೆ, ವಿರಪ್ಪನಗಿಂತ ದೊಡ್ಡ ಕಳ್ಳರು ಇವರುಗಳು ಎನ್ನುವ ಅರ್ಥದಲ್ಲಿ ರೈತರು ಆಕ್ರೋಷ ಹೊರಹಾಕುತ್ತಿದ್ದಾರೆ ಇದು ಈ ಸರ್ಕಾರದ ದುರಾಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ, ಇಷ್ಟೋಂದು ಭ್ರಷ್ಟ ಸಚಿವರುಗಳಿಂದ ತುಂಬಿರುವ ಈ ಸರ್ಕಾರ 5 ವರ್ಷ ಅಧಿಕಾರ ಪೂರೈಸುವುದಿಲ್ಲಾ ಎಂದು ಮಾಜಿ ಕೇಂದ್ರಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.

ಬಿಹಾರ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ದೇಶದ ಪ್ರಧಾನಿ ಸನ್ಮಾನ್ಯ ಶ್ರೀನರೇಂದ್ರಮೋದಿಜೀಯವರಿಗೆ, ರಾಷ್ಟ್ರೀಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಜೆ.ಪಿ. ನಡ್ಡಾಜೀ ಅವರಿಗೆ ಚುನಾವಣೆ ಚಾಣುಕ್ಯ, ದೇಶದ ಗೃಹ ಸಚಿವರಾದ ಸನ್ಮಾನ್ಯ ಶ್ರೀ ಅಮೀತ ಷಾರವರಿಗೆ, ಜೆ.ಡಿ.ಯು ಮುಖ್ಯಸ್ಥರಾದ ಸನ್ಮಾನ್ಯ ಶ್ರೀ ನೀತಿಷ ಕುಮಾರರವರಿಗೆ ಮತ್ತು ಸಮಸ್ತ ಬಿಹಾರದ ಜನತೆಗೆ ಭಗವಂತ ಖೂಬಾ ಧನ್ಯವಾದಗಳು ಮತ್ತು ಅಭಿನಂದನೆಗಳು ತಿಳಿಸಿದ್ದಾರೆ.

# ಬಸವಜ್ಯೋತಿ ಎಲ್ಲರ ಮನೆಮನ ಬೆಳಗಲಿ: ಪೂಜ್ಯ ಚನ್ನಬಸವಾನಂದ ಶ್ರೀ




ಮಲ್ಲಮ್ಮ ನುಡಿ ವಾರ್ತೆ

**ಬೀದರ್: ನ. 14 :** 1992ರಲ್ಲಿ ರಾಷ್ಟೀಯ ಬಸವ ದಳದ ಮೂಲಕ ಪೂಜ್ಯ ಲಿಂಗಾನಂದ ಸ್ವಾಮೀಜಿ ಹಾಗೂ ಪೂಜ್ಯ ಮಾತಾಜಿಯವರು ಹೊತ್ತಿಸಿದ ಈ ಬಸವಜ್ಯೋತಿ ಕಾರ್ಯಕ್ರಮವು ಇಂದಿಗೂ ಮುನ್ನಡೆಸಿಕೊಂಡು ಬರಲಾಗುತ್ತಿದೆ. ಈ ಜ್ಯೋತಿಯು ಎಲ್ಲರ ಮನೆಮನ ಬೆಳಗಲಿ ಎಂದು ಬೆಂಗಳೂರಿನ ಬಸವ ಗಂಗೋತ್ರಿಯ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷ ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ತಿಳಿಸಿದರು.

ಅಲ್ಲಮಪ್ರಭು ನಗರದ ಹಿರಿಯ ಶರಣ ಜೀವಿಗಳಾದ ಮಲ್ಲಿಕಾರ್ಜುನ ಬುಕ್ಕಾ ಅವರ ಮನೆಯಲ್ಲಿ ರಾಷ್ಟೀಯ ಬಸವ ದಳದವತಿಯಿಂದ ಆಯೋಜಿಸಿದ ಮಾಸಿಕ ಬಸವ ಜ್ಯೋತಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ಇಂದಿನ ಕಾಲದಲ್ಲಿ ಯುವಕರು ಧರ್ಮ ಮಾರ್ಗದ ಕಡೆಗೆ ಒಲವು ತೋರುತ್ತಿಲ್ಲ ಎಂಬುದನ್ನು ಮನಗಂಡ ಪೂಜ್ಯ ಅಪ್ಪಾಜಿ ಮಾತಾಜಿಯವರು ಬಸವ ತತ್ವದ ಕಡೆಗೆ ಜನರು ಬರದೇ ಇದ್ದಾಗ, ಬಸವ ತತ್ವವನ್ನೇ ಜನರ ಮನೆಮನಗಳ ಬಾಗಿಲಿಗೆ ಕೊಂಡೊಯ್ಯಲು ಬಸವ ಜ್ಯೋತಿ ಎನ್ನುವ ಅರ್ಥಪೂರ್ಣ ಕಾರ್ಯಕ್ರಮ ಆರಂಭಿಸಿದರು. ಜಿಲ್ಲೆಯಲ್ಲಿ ಇಂದಿಗೆ ಸಾವಿರಾರು ಬಸವಜ್ಯೋತಿ ಕಾರ್ಯಕ್ರಮಗಳು ನಡೆದಿವೆ. ಲಕ್ಷಾಂತರ ಬಸವ ಭಕ್ತರು ತಯಾರಾಗಿ, ಸನ್ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಈ ಬಸವಜ್ಯೋತಿ ಶತಶತಮಾನಗಳವರೆಗೆ ಹೀಗೆ ಎಲ್ಲರ ಮನೆಮನಗಳಿಗೆ ತಲುಪಲಿ ಎಂದು ಆಶಿಸಿದರು.

ನೇತೃತ್ವ ವಹಿಸಿದ್ದ ಪೂಜ್ಯ ಶ್ರೀ ಸದ್ಗುರು ಮಾತೆ ಸತ್ಯಾದೇವಿ ಮಾತನಾಡಿ ಕಾಯಕ ಎಲ್ಲರ ಉಸಿರಾಗಲಿ. ಹೆಣ್ಣಾಗಲಿ ಗಂಡಾಗಲಿ ಕಾಯಕದಿಂದಲೇ ಮುಕ್ತಿ ಎನ್ನುವ ಶರಣವಾಣಿಯನ್ನು ಇಂದಿನ ಆಧುನಿಕ ಕಾಲದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕೆಂದರು.

ಕಾರ್ಯಕ್ರಮ ಉದ್ಘಾಟಿಸಿದ ಖ್ಯಾತ ಯೋಗ ತರಬೇತುದಾರರಾದ ಯೋಗೇಂದ್ರ ಯದಲಾಪುರೆ ಮಾತನಾಡಿ ನಾವೆಲ್ಲ ಭೌಗೋಳಿಕವಾಗಿ ಹಿಂದೂ ಭಾರತೀಯರೆ. ಆದರೆ ಧಾರ್ಮಿಕವಾಗಿ ಸ್ವತಂತ್ರ ಲಿಂಗಾಯತ ಧರ್ಮಿಯರು. ಲಿಂಗಾಯತ ಧರ್ಮದ ಮಾನ್ಯತೆಗಾಗಿ ಹೋರಾಟ ಮುಂದುವರೆಯಲಿ ಎಂದರು.

ಅಲ್ಲಮಪ್ರಭು ನಗರದ ಹಿರಿಯ ಗಣ್ಯರಾದ ಗಣಪತರಾವ ಗುಡೂರೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಚರಜಂಗಮ ಸಿದ್ರಾಮಪ್ಪ ಕಪಲಾಪುರೆ, ಪ್ರಮುಖರಾದ ಶಿವಶರಣಪ್ಪ ಪಾಟೀಲ ಹಾರೂರಗೇರಿ, ಮಲ್ಲಯ್ಯ ಸ್ವಾಮಿ, ಮಲ್ಲಿಕಾರ್ಜುನ ಶಾಪುರೆ, ಕಾಶಿನಾಥ ಸೂರ್ಯವಂಶಿ, ಮನ್ಮಥಯ್ಯ ಸ್ವಾಮಿ, ಶಾಂತಪ್ಪ ಮುಗಳಿ, ರವಿಕಾಂತ ಬಿರಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಾಂತಮ್ಮ ಮಲ್ಲಿಕಾರ್ಜುನ ಬುಕ್ಕಾ ಬಸವ ಪೂಜೆ ನೆರವೇರಿಸಿದರೆ, ಸಿದ್ರಾಮೇಶ್ವರ ಕನ್ನಾ ಷಟಸ್ಥಲ ಧ್ವಜಾರೋಹಣ ನೆರವೇರಿಸಿದರು. ಕಲ್ಯಾಣರಾವ ಬಂಬುಳಗಿ ಹಾಗೂ ಶ್ರೀನಾಥ ಕೋರೆ ವಚನ ಗಾಯನ ಮಾಡಿದರು. ಬಸವಕುಮಾರ ಚಟ್ನಳ್ಳಿ

# ಮಡಿವಾಳ ಸಮುದಾಯ ಸಂಕಷ್ಟ ಪರಿಹಾರಕ್ಕೆ ಶೀಘ್ರ ಕ್ರಮ ನಿಗಮ ಅಧ್ಯಕ್ಷ ಸಿ. ನಂಜಪ್ಪ ಭರವಸೆ



ಮಲ್ಲಮ್ಮ ನುಡಿ ವಾರ್ತೆ

**ಬೀದರ್: ನ.** ಕರ್ನಾಟಕ ರಾಜ್ಯ ಮಡಿವಾಳರ ನಿಗಮದ ರಾಜ್ಯ ಅಧ್ಯಕ್ಷರಾದ ಸಿ. ನಂಜಪ್ಪ ಅವರು ಬೀದರ ಜಿಲ್ಲೆಯ ಮಡಿವಾಳರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ನಿಗಮದ ವಿವಿಧ ಕಲ್ಯಾಣ ಸೌಲಭ್ಯಗಳು ಇನ್ನೂ ತಲುಪದ ಅಂತಿಮ ಹಂತದ ಮಡಿವಾಳರಿಗೆ ಶೀಘ್ರದಲ್ಲೇ ಎಲ್ಲಾ ಸೌಲಭ್ಯಗಳನ್ನು ತಲುಪುವಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬೀದರ ಜಿಲ್ಲೆಯಲ್ಲಿ ಮಡಿವಾಳ ಸಮುದಾಯಕ್ಕೆ ಸ್ವಂತ ಸಮುದಾಯ ಭವನವಿಲ್ಲದೇ ಇರುವ ಸಮಸ್ಯೆಯನ್ನು ಉದ್ದೇಶಿಸಿ, ಮುಖ್ಯಮಂತ್ರಿಗಳ ಬಳಿಯಿಂದ ಸಿ.ಎ. ಸೈಟ್ ಮಂಜೂರು ಮಾಡಿಸಿಕೊಡುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ವಿಭಾಗೀಯ ಕಾರ್ಯದರ್ಶಿ ದಿಗಂಬರ ಮಡಿವಾಳ, ಬೀದರ ಜಿಲ್ಲಾ ಅಧ್ಯಕ್ಷ ಸುಭಾಷ ಮಡಿವಾಳ, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಕಂದಗುಳ, ಮಾಜಿ ಅಧ್ಯಕ್ಷ ಧನರಾಜ ಮಡಿವಾಳ, ಉಪಾಧ್ಯಕ್ಷ ನಾಗರಾಜ ಮಡಿವಾಳ, ಶಿವಕುಮಾರ ಚೌಧರಿ, ಶಿವಕುಮಾರ ಪರೀಟ, ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಮಡಿವಾಳ, ಗೋಪಾಲ್ ಮಡಿವಾಳ, ಸಂಗಮೇಶ್ ಮೈಲುರ, ಗೋವಿಂದ ಚೌಬಾರಾ

# ಕನ್ನಡ ಡಿಂಡಿಮ ಚಂದನದಲ್ಲಿ ನ,15ರಂದು ವಿಶೇಷ ಸಂವಾದ




ಮಲ್ಲಮ್ಮ ನುಡಿ ವಾರ್ತೆ

**ಕಲಬರಗಿ:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಕಲಬುರಗಿ ದೂರದರ್ಶನ ಕೇಂದ್ರವು ಸಿದ್ಧಪಡಿಸಿದ ವಿಶೇಷ ಸಂವಾದ ಕಾರ್ಯಕ್ರಮ "ಬಾರಿಸು ಕನ್ನಡ ಡಿಂಡಿಮ " ಚಂದನ ವಾಹಿನಿಯಲ್ಲಿ ನವೆಂಬರ್ 15 ರಂದು ಮಧ್ಯಾಹ್ನ 2:30ಕ್ಕೆ ಪ್ರಸಾರವಾಗಲಿದೆ.

ಗಡಿನಾಡು ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ ಮುಂತಾದ ಪ್ರದೇಶಗಳಲ್ಲಿ ಕನ್ನಡವನ್ನು ಕಟ್ಟುವ ಕಾಯಕದ ಬಗ್ಗೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ್ ಚನ್ನಶೆಟ್ಟಿ ಮತ್ತು ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿಜಯಕುಮಾರ್ ತೇಗಲತಿಪ್ಪಿ ಅವರೊಡನೆ ನಡೆಸಿದ ಸಂವಾದ ಚಂದನ ವಾಹಿನಿಯಲ್ಲಿ ಪ್ರಸಾರವಾಗಲಿದೆ. ಸಂವಾದವನ್ನು ಡಾ. ಸದಾನಂದ ಪೆರ್ಲ ನಡೆಸಿಕೊಟ್ಟಿದ್ದಾರೆ.

ಈ ಕಾರ್ಯಕ್ರಮವನ್ನು ದೂರದರ್ಶನ ಕೇಂದ್ರದ ನಿರ್ಮಾಪಕರಾದ ಸಂಗಮೇಶ್ ಮತ್ತು ಮಲ್ಲಿಕಾರ್ಜುನ್ ನಿರ್ಮಾಣ ಮಾಡಿದ್ದಾರೆ. ತಾಂತ್ರಿಕ ಸಿಬ್ಬಂದಿ ವರ್ಗ ನೆರವಾಗಿದೆ. ಆಸಕ್ತ ವೀಕ್ಷಕರು ಕಾರ್ಯಕ್ರಮವನ್ನು ನೋಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿ ದೂರದರ್ಶನ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೂಫಿ ಸಂತರ ದೃಷ್ಟಿಯಲ್ಲಿ ಅಲ್ಲಾನ ಸೃಷ್ಟಿ ಅಮೂಲ್ಯ : ಪ್ರೊ ಅಬ್ದುಲ್ ಹಮೀದ್ ಅಕ್ಬರ

ಮಲ್ಲಮ್ಮ ನುಡಿ ವಾರ್ತೆ

**ಕಲಬರಗಿ :** ಭಾರತದಲ್ಲಿ ಸೂಫಿ ಸಂಪ್ರದಾಯದ ಇತಿಹಾಸ ಶತಮಾನಗಳಷ್ಟು ಹಳೆಯದು. ಸೂಫಿ ಸಂತರು ಮೃದುಸ್ವಭಾವಿಗಳು. ಅಲ್ಲಾನ ಸಕಲ ಸೃಷ್ಟಿಯೂ ಅವರಿಗೆ ಅಮೂಲ್ಯವಾಗಿದೆ. ಅವರಲ್ಲಿ ಜಾತಿ, ಧರ್ಮ ಅಥವಾ ಲಿಂಗದ ಬೇಧವಿಲ್ಲ ಎಂದು ಕೆಬಿಎನ್ ವಿಶ್ವವಿದ್ಯಾಲಯದ ಉರ್ದು ವಿಭಾಗದ ಮುಖ್ಯಸ್ಥ ಪ್ರೊ. ಅಬ್ದುಲ್ ಹಮೀದ್ ಅಕ್ಬರ ಹೇಳಿದರು.

ಅವರು ಮಂಗಳವಾರ ಎಸ್ ಎಸ್ ಎಫ್ ಆಯೋಜಿಸಿದ್ದ ಸಾಹಿತ್ಯ ಉತ್ಸವದ ಭಾಗವಾದ "ಹಜರತ್ ಖಾಜಾ ಬಂದಾ ನವಾಜರ ಆತ್ಮೀಯ ಪರಂಪರೆ ಮತ್ತು ಭಾರತದಲ್ಲಿ ಸೂಫಿ ಚಳವಳಿ" ವಿಚಾರ ಸಂಕಿರಣದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ವ್ಯಾಪಾರ ಮಾರ್ಗಗಳ ಮೂಲಕ ಸೂಫಿವಾದವೂ ಉಪಖಂಡಕ್ಕೆ ಪ್ರವೇಶಿಸಿತು. ಬಳಿಕ ಹಜರತ್ ನಿಜಾಮುದ್ದೀನ್ ಮಹಬೂಬೆ ಇಲಾಹಿ, ಹಜರತ್ ಖ್ವಾಜಾ ಫರೀದುದ್ದೀನ್ ಗಂಜ್ ಶಕರ್, ಹಜರತ್ ಪೀರ್ ನಸೀರುದ್ದೀನ್ ಚಿರಾಗ್ ದೆಹಲವಿ ಮತ್ತು ಹಜರತ್ ಖಾಜಾ ಬಂದೆ ನವಾಜರ ಕಾಲದಲ್ಲಿ ಇದಕ್ಕೆ ಮತ್ತಷ್ಟು ಬಲ ಸಿಕ್ಕಿತು. ಭಾರತದಲ್ಲಿ ಇಸ್ಲಾಂ ಧರ್ಮದ ಪ್ರಸಾರದಲ್ಲಿ ಸೂಫಿವಾದವು ಮಹತ್ತರ ಪಾತ್ರವಹಿಸಿದೆ. ಅಲ್ಲದೇ ಹಜರತ ಖಾಜಾ ಬಂದೆ ನವಾಜರ ಕಾಲದಲ್ಲಿ ಸೂಫಿವಾದವು ಅತ್ಯಂತ ಶ್ರೇಷ್ಟ ಹಂತ ತಲುಪಿತು. ಬಂದಾ ನವಾಜರ ಆಗಮನದಿಂದ ಗುಲ್ಬರ್ಗಾ ಅಂತಾರಾಷ್ಟೀಯ ಮಟ್ಟದಲ್ಲಿ ಪ್ರಸಿದ್ಧಿಯಾಯಿತು. ಇಂದಿಗೂ ಹಜರತ್ ಖ್ವಾಜಾ ಬಂಡೆ ನವಾಜರ ವಂಶಜರು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಗುಲ್ಬರ್ಗಾದ ಹೆಸರನ್ನು ಮುಂದುವರೆಸುತ್ತಿದ್ದಾರೆ. ಬಂದೆ ನವಾಜರ ಮಿಷನ್ ಅನ್ನು ಅವರು ಸ್ಥಳೀಯ ಮಟ್ಟಕ್ಕೆ ಸೀಮಿತಗೊಳಿಸದೆ, ಜಾಗತಿಕ ಮೌಲ್ಯ ನೀಡಿದರು ಎಂದು ಹೇಳಿದರು. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕರದ ಅಪ್ಪಗಿರಿ ಸೋಮಶೇಖರ ಉದ್ಘಾಟಿಸಿ ಮಾತನಾಡುತ್ತ, ಕಲ್ಯಾಣ ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸಾಮರಸ್ಯ ಇನ್ನೂ ಇದೆ ಏಕೆಂದರೆ ಇಲ್ಲಿ ಸೂಫಿ ಸಂತರು ಮತ್ತು ಶರಣರು ನೆಲೆಸಿದ್ದರು. ಸೂಫಿ ಸಂತರಾದ ಬಂದೆ ನವಾಜರ ಕೊಡುಗೆ ಬಹಳವಿದೆ. ಸೂಫಿ ಎಂದರೆ ಜ್ಞಾನ. ಸೂಫಿ ಮತ್ತು ತತ್ವ ಪದಗಳನ್ನು ಅಧ್ಯಯನ ಮಾಡಿದರೆ ಬಹಳಷ್ಟು ಸಾ ಮ್ಯತೆಗಳಿವೆ. ಸೂಫಿ ಸಂತರು ತಮ್ಮ ಅಗತ್ಯ ಕ್ಕಿಂತ ಹೆಚ್ಚಿನ ಸಂಗ್ರಹ ಮಾಡುವುದಿಲ್ಲ. ಇದನ್ನೇ ಬುದ್ಧ ಕೂಡ ಹೇಳಿದ್ದು. ಸೂಫಿಗಳು ಲೋಕ ಜ್ಞಾನ ಹೊಂದಿದ್ದಾರೆ. ಪ್ರೀತಿಯೇ ಭೂಮಿ, ಚಂದ್ರ, ನೀರು, ನಕ್ಷತ್ರ, ಹಣ್ಣು, ಹೂವು, ಸೂರ್ಯ ಎಂದು ಬಂದೆ ನವಾಜ್ರು ಹೇಳಿದ್ದಾರೆ. ಕಬೀರ, ನಾಮದೇವ, ತುಕಾರಾಂ, ಗುರುನನಕ್, ಕೂಡ ಸೂಫಿ ಪರಂಪರೆ ಇಂದ ಪ್ರಭಾವಿತರಾದವರು. ಸೂಫಿ ಪ್ರಪಂರೇಯ ಪ್ರಕಾರ ಎಲ್ಲ ಮನುಷ್ಯರು ದೇವರ ಮಕ್ಕಳು ಹಾಗೂ ಸಮಾನರು. ಸೂಫಿ ಪರಂಪರೆ, ಜ್ಯಾತ್ಯತೀತ ಮತ್ತು ಧರ್ಮಾತೀತ ಎನ್ನುವುದಕ್ಕೆ ಬಬಲಾದಿ ಸಿದ್ಧ, ಕೊಡೇಕಲ ಬಸವಣ್ಣ, ಶಿರಹಟ್ಟಿ ಫಕಿ ರೇಶ,

ಸಾವಳಗಿ ಸಿದ್ಧಲಿಂಗ ಸಾಕ್ಷಿ. ಭಾರತ ಇಂದಿಗೂ ಸಹ ಧರ್ಮ ಸಹಿಷ್ಣುತೆ, ಸಾಮಾಜಿಕ ಸಾಮರಸ್ಯ ಇರುವುದೇ ಇಂತಹ ಸಂತರಿಂದ. ಹಿಂದೂ ಮುಸ್ಲಿಂ ಸಾಮರಸ್ಯ ವಿರುವ ಗುರು ಶಿಷ್ಯರ ಸಂಬಂಧಗಳನ್ನು ಕಾಣ ಬಹುದು. ಸೂಫಿ ಸಂತರ ಚಿಂತನೆಗಳನ್ನು ಅರ್ಥ ಮಾಡಿಕೊಂಡರೆ ವರ್ತಮಾನದ ಬಿಕ್ಕಟ್ಟುಗಳಿಗೆ ಪರಿಹಾರ ಕಂಡು ಕೊಳ್ಳಬಹುದು ಎಂದರು.




ರಿಯಾಜ ಅಹ್ಮದ ಗೋಡೆ ಮಾತನಾಡುತ್ತ, ಇದು ರಾಷ್ಟಮಟ್ಟದ ಮಹತ್ವದ ವಿಚಾರ ಸಂಕಿರಣ. ಬಂದೆನವಾಜರ ವ್ಯಕ್ತಿತ್ವ ಅತಿ ಶ್ರೇಸ್ಟ. ಅವರದು ಅಪರಿಮಿತ ಪಂಡಿತ್ಯ ಎಂದು ಅನೇಕ ಉದಾಹರಣೆಗಳೊಂದಿಗೆ ಹೇಳಿದರು. ಗುಲ್ಬರ್ಗಾವನ್ನು ಅಂತಾರಾಷ್ಟೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದವರು ಬಂದಾನವಾಜರು.

ಬಂದಾ ನವಾಜರ ಜೀವನ ಚರಿತ್ರೆಯ ಕಿರು ಪರಿಚಯ ನೀಡಿದರು. ಅಲ್ಲದೇ ಸೂಫಿಗಳು ಅತಿ ಸಣ್ಣ ಘಟನೆ ಗಳನ್ನು ಕೂಡ ನಮೂದಿಸಿರುತ್ತಾರೆ. ಆದರೆ ದುರದೃಶ್ಯವಶಾತ ಅವು ನಮಗೆ ಸುಲಭವಾಗಿ ಲಭ್ಯ ವಾಗುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಬಂದಾ ನವಾಜರ ಇನ್ನೂ ಅನೇಕ ಪುಸ್ತಕಗಳು ಕನ್ನಡಕ್ಕೆ ತುರ್ಜುಮೆಯಾಗಬೇಕು ಎಂದು ಅಭಿಪ್ರಾಯಪಟ್ಟರು. ದಕ್ಕನಿ ಭಾಷೆಯ ಮೊದಲ ಕೃತಿ 'ಮಿರಾಜುನ ನ ಆಶಕಿನ' ರಚಿಸುದ್ದೆ ಬಂದಾ ನವಾಜರು ಎಂದು ಹೇಳಿ ಗುಲ್ಬರ್ಗಾಕ್ಕೆ ಅವರು ನೀಡಿದ ಕೊಡುಗೆಗಳನ್ನು ನೆನೆದರು.

ನವೆಂಬರ 14, 15 ಮತ್ತು 16 ರಂದು ಎಸ್ ಎಸ್ ಎಫ ವತಿಯಿಂದ ರಾಷ್ಟಮಟ್ಟದ ಸಾಹಿತ್ಯೋತ್ಸವ ನಡೆಯಲಿದೆ. 100 ಕ್ಕಿಂತಲೂ ಹೆಚ್ಚಿನ ಸ್ಪರ್ಧೆಗಳಿವೆ ಎಂದರು. ದೇಶದ ಎಲ್ಲೆಡೆಯಿಂದ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಎಸ ಎಸ ಎಫ ಭಾರತದ ರಾಷ್ಟ್ರೀಯ ಕಾರ್ಯದರ್ಶಿ ದಿಲ್ಶಾದ್ ಅಹಮದ ಹೇಳಿದರು.

ಮೌಲಾನಾ ಹ್ಯಾರಿಸ್ ಮೊಯಿನಿ ಪ್ರಾರ್ಥಿಸಿದರೆ, ಮುಹಮ್ಮದ್ ಅಬುಝುರ್ ನಾತ ಪ್ರಸ್ತುತ ಪಡಿಸಿದರು. ಎಸ ಎಸ ಎಫ ಭಾರತದ ರಾಷ್ಟ್ರೀಯ ಕಾರ್ಯದರ್ಶಿ ದಿಲ್ಶಾದ್ ಅಹಮದ ವಂದಿಸಿದರು. ಎಸ್ ಎಸ್ ಎಫ್ ಗುಲ್ಬರ್ಗ ಜಿಲ್ಲಾಧ್ಯಕ್ಷರು ಯೂಸುಫುದ್ದೀನ್ ಸರ್ಮಸ್ತ ನಿರೂಪಿದರು. ಈ ಸಂದರ್ಭದಲ್ಲಿ ಕೆಬಿಎನ ವಿವಿಯ ಎಲ್ಲ ವಿದ್ಯಾರ್ಥಿಗಳು, ಉಪನ್ಯಾಸಕರು ಹಾಜರಿದ್ದರು

# ಮನಸ್ಸು ಅರಿಯುವ ಮಾರ್ಗ 'ಅಸ್ತಿತ್ವದ ಅನ್ವೇಷಣೆ'

**'ಸೃಷ್ಟಿಬಲೇಶ' ಎಂಬ ವಿಶಿಷ್ಟ ಅಂಕಿತದೊಂದಿಗೆ ವಚನಗಳನ್ನು ಬರೆಯುತ್ತಿರುವ ಕೆಂಭಾವಿಯ ಯುವ ಲೇಖಕರಾದ ವೀರಣ್ಣ ಕಲಕೇರಿಯವರು ಸಾಹಿತ್ಯ ಮತ್ತು ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಗರ ನಾಡಿನಲ್ಲಿ ಸಾಂಸ್ಕೃತಿಕ ಕಲರವವನ್ನು ಇನ್ನಷ್ಟು ಮತ್ತಷ್ಟು ಹೆಚ್ಚಿಸಿದವರಲ್ಲಿ ಪ್ರಮುಖರಾಗಿದ್ದಾರೆ. ಕೆಂಭಾವಿ ಭೋಗಣ್ಣ, ಮುದನೂರು ಜೇಡರ ದಾಸಿಮಯ್ಯನವರ ಪರಿಸರದಲ್ಲಿರುವ ವೀರಣ್ಣನವರ ಬರಹದ ಹಿಂದೆ ಹನ್ನೆರಡನೆಯ ಶತಮಾನದ ಶರಣರ ವಚನಗಳ ಅನುಭಾವದ ಛಾಯೆ ದಟ್ಟವಾಗಿಯೇ ಇದೆ. ಆದರೆ ಅಭಿವ್ಯಕ್ತಿ ಕ್ರಮ ಆಧುನಿಕತೆಯಲ್ಲಿ ಮಿಂದೆದ್ದಿದೆ ಎಂದು ಹೇಳಬಹುದು.**

ಹಲವು ವರ್ಷಗಳ ಕಾಲ ಬರಹದಲ್ಲಿ ತೊಡಗಿಸಿಕೊಂಡ ಇವರು ವಚನಗಳಾಚೆಯು ಕೂಡ ಕವಿತೆ, ಗಜಲ್, ಮಕ್ಕಳ ಸಾಹಿತ್ಯ, ಪತ್ರಿಕೆಗೆ ಅಂಕಣಗಳನ್ನು ಬರೆಯುವ ಮೂಲಕ ಪರಿಚಿತಗೊಂಡ ವೀರಣ್ಣನವರು ಅನುಭವಗಳನ್ನು ನಿರೂಪಿಸುವ ಇವರ ಕ್ರಮ ಸರಳತೆಯಲ್ಲಿಯೇ ಒಂದು ಗಮ್ಯತೆಯನ್ನು ರೂಡಿಸಿಕೊಂಡಿದೆ. ಹಿರಿಯ ಕಲಕೇರಿ ಅವರ ಬರಹವು ಓದಿಸಿಕೊಂಡು ಹೋಗುವುದಲ್ಲದೆ ತಾತ್ವಿಕ ಜಿಜ್ಞಾಸೆಗೆ ನಮ್ಮನ್ನು ಇಳಿಸಿಬಿಡುವುದು. ಅವರ ಬರಹ ನೋಡಲು ಓದಲು ಸರಳವಾಗಿ ಕಂಡರು ಮತ್ತೆ ಮತ್ತೆ ಓದಿದಾಗ ಹೊಸತನದ ಹಾದಿಯನ್ನೇ ತೋರಿಸುತ್ತವೆ. ಕಲಕೇರಿ ಅವರ ಮನಸ್ಸು ಅರಿಯುವ ಬರಹಗಳು ಎಲ್ಲ ಕಾಲದ ವಾಸ್ತವ ಹಾಗೂ ಭವಿಷ್ಯದ ನುಡಿಸಿರಿಯಾಗಿ ನಮ್ಮ ಕಣ್ಮುಂದೆ ನಿಚ್ಚಳವಾಗಿರುವವು.

ತಮ್ಮ ಅನುಭಾವಿಕ ಪಯಣದಲ್ಲಿ ಅಸ್ಮಿತೆಯನ್ನು ಕಂಡುಕೊಳ್ಳಲು ಹವಣಿಸುವ ವೀರಣ್ಣನವರು ತಮ್ಮನ್ನು ತಾವು ಹಲವು ಪ್ರಯೋಗಗಳಿಗೆ ಒಡ್ಡಿಕೊಳ್ಳುವ ರೂಢಿಯನ್ನು ಇಟ್ಟುಕೊಂಡಿದ್ದಾರೆ. ಈ ರೂಢಿಯ ಫಲಿತವಾಗಿ ಇತ್ತೀಚೆಗೆ ಹೊರಬಂದಿರುವ ಪುಸ್ತಕ 'ಅಸ್ತಿತ್ವದ ಅನ್ವೇಷಣೆ'. ಇದೊಂದು ಕಿರು ಲೇಖನಗಳ ಕೃತಿ, ಇಲ್ಲಿನ ಎಲ್ಲಾ ಲೇಖನಗಳು ಆಧ್ಯಾತ್ಮಿಕತೆಯನ್ನು ವಿಕಸನಗೊಳಿಸುವ ತಾಣಗಳಾದ ಅರಿವು, ಆಚಾರ, ಸಾಧನೆ, ಸತ್ಯ, ಪ್ರೇರಣೆ, ಪ್ರಭಾವ, ಭಕ್ತಿ, ವಿವೇಕ, ಸರಳತೆ, ಸ್ನೇಹ, ಮನಸ್ಸು, ಕನಸು, ಕಲ್ಪನೆ, ನಗು, ದುಃಖ, ನೆಮ್ಮದಿ, ಬದುಕು, ಪ್ರಸನ್ನತೆ, ಆತ್ಮಸಾಕ್ಷಿ ಹಾಗೂ ನೈತಿಕತೆಯ ಒಳದನಿಯನ್ನು ಸೂಕ್ಷ್ಮವಾಗಿ ಗಟ್ಟಿಗೊಳಿಸುತ್ತಲೇ ವ್ಯಕ್ತಿತ್ವದ ವಿಕಸನಕ್ಕೆ ಪೂರಕವಾಗುವಂತೆ, ಕೌದಿಯ ಚಿತ್ತಾರದ ಹಾಗೆ ರೂಪಗೊಂಡಿವೆ. ಇಲ್ಲಿನ ಬಹುತೇಕ ಲೇಖನಗಳು ಮನಸ್ಸಿನ ಮೇಲೆ ಗಾಢವಾಗಿ ಪ್ರಭಾವ ಬೀರುವ ಸಾಲಿನ ಒಂದು ಎಳೆಯನ್ನು ಹಿಡಿದು ಸಾಗುತ್ತಾ ಸಾಗುತ್ತಾ ತನ್ನ ಮಡಿಲಿಗೆ ಹಲವು ಎಳೆಗಳನ್ನು ತಂದು ಜೋಡಿಸಿಕೊಂಡು ಸಶಕ್ತವಾಗಿ ಬೆಳೆಯುವ ಬಗೆ ಬಹು ಸೊಗಸಾಗಿದೆ.

ನಕ್ಕವರಿಗೆ ನಾ ಬಳ್ಳಗಾಯ, ತತ್ವವಿರದ ಅಸ್ತಿತ್ವಕ್ಕೆ ಅರ್ಥ ಬರದು, ಆಡಂಬರಕ್ಕೆ ಆಯುಸ್ಸು ಕಡಿಮೆ, ಭಕ್ತಿ ಎಂದರೇನು? ಅರಿವು ಅರಳಿಸೋಣ, ಹದವಿಲ್ಲದ ವಾದ ಹಗೆತನಕ್ಕೆ ನಾಂದಿ, ಸರಳತೆಗೆ ಸಾವಿರ ಬಲ ಸಹಜ, ಶ್ರೇಷ್ಠತೆಗಾಗಿ ಸದಾ ಕ್ರಿಯಾಶೀಲರಾಗಿ, ಭಾವ ಶುದ್ಧಿಯಾದರೆ ಭಾಗ್ಯಕ್ಕೇನು ಕಮ್ಮಿ ಇಂತಹ ಸಾಲುಗಳನ್ನು ಇಟ್ಟುಕೊಂಡು ಬದುಕಿನ ಸರಳ ಸೂತ್ರಗಳನ್ನು ಬಿತ್ತರಿಸುವ ಬರಹಗಳು ಬಹು ಲಾಲಿತ್ಯಪೂರ್ಣಗಿದೆ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮೌಲ್ಯಯುತವಾಗಿ ಬದುಕುವುದು ಸವಾಲಾಗಿದೆ. ಈ ಸವಾಲನ್ನು ಮೆಟ್ಟಿ ಮುನ್ನಡಲೆಯಲೇಬೇಕಿದೆ. ಅದ-ಕ್ಕೆ ಸಿದ್ಧತೆ ಮತ್ತು ಸಂಸ್ಕಾರಯುತ ನಡೆ-ನುಡಿ ಅತಿ ಅವಶ್ಯಕ ಎಂದು ಪ್ರತಿಪಾದಿಸುವ ಇಲ್ಲಿನ ಲೇಖನಗಳು ದಾರ್ಶನಿಕತೆಯ ಸುತ್ತ ಸುತ್ತುತ್ತವೆ.



ವ್ಯಕ್ತಿ ತನ್ನ ವ್ಯಕ್ತಿತ್ವದಿಂದ ತನ್ನ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ನಿಟ್ಟಿನಲ್ಲಿ ನಡೆಯಬೇಕಾದ ದಾರಿ, ನುಡಿಯ ಬೇಕಾದ ನುಡಿಯ ಸ್ವರೂಪವನ್ನು ಹರಡುವ ಹಂಬಲ ಹೊಂದಿದ ಲೇಖಕರು ವಿವೇಕದ ಮಾತುಗಳನ್ನು ಹೇಳುತ್ತಲೇ ನಮ್ಮನ್ನು ನೈತಿಕತೆಯ ಆಳಕ್ಕೆ ಕರೆದುಕೊಂಡು ಹೋಗುವರು. 'ಬುದ್ಧಿ ಇದ್ದವರೆಲ್ಲರನ್ನೂ ಬುದ್ಧಿವಂತರೆನ್ನಲಾಗದು? ಬಾಹ್ಯ ಸಂಪತ್ತು ಹೊಂದಿದವರು ಸಿರಿವಂತರೆ? ಮುಂದಿನ ಪೀಳಿಗೆಗೆ ನಮ್ಮ ಹೆಜ್ಜೆಗುರುತುಗಳು ಏನು? ಪ್ರಸನ್ನತೆಯ ಭಾವ ಉದಯಿಸಲು ಎನ್ನನ್ನು ಎರವಲು ಪಡೆಯಬೇಕು? ಹತ್ತಾರು ಪ್ರಶ್ನೆಗಳು ಇದಕ್ಕೆ ಸಂವಾದಿಯಾದ ಉತ್ತರಗಳು ಓದುಗರನ್ನು ಸನ್ಮಾರ್ಗದ ದಾರಿಗೆ ತೋರು ದೀಪಗಳಾಗಿವೆ. ಜೀವನದ ಪಯಣದಲ್ಲಿ ಧನಾತ್ಮಕ ಚಿಂತನೆಗಳು ನಾವು ನಡೆಯಬೇಕಾದ ದಾರಿಯನ್ನು ವಿಸ್ತರಿಸುವವು, ಆದರೆ ಆ ಚಿಂತನೆಗಳ ಲೋಕವನ್ನು ಅಸ್ತಿತ್ವದ ಅನ್ವೇಷಣೆಯಲ್ಲಿ ತೆರೆದುಕೊಳ್ಳುತ್ತದೆ.

ಕಿರಿದನ್ನು ಹಿರಿದು ಮಾಡುವುದು ಸುಲಭ ಆದರೆ ಹಿರಿದನ್ನು ಕಿರಿದು ಮಾಡಿ, ಅದರ ಭಾವದ ನೆಲೆಗೆ ಚ್ಯುತಿ ಬಾರದಂತೆ ಬರೆಯುವುದು ಬರಹಗಾರರಾದವರಿಗೆ ಸವಾಲೇ ಸರಿ. ಈ ಸವಾಲನ್ನು ಬಹು ಎಚ್ಚರಿಕೆಯಿಂದ ಸ್ವೀಕರಿಸಿದ ವೀರಣ್ಣ ಕಲಕೇರಿ ಅವರು ಇದಕ್ಕೆ ತಮ್ಮದೇ ವಚನಗಳ ಸಾಲುಗಳನ್ನು, ಶರಣರ ಅನುಭಾವದ ನುಡಿಗಳನ್ನು ಬಳಸಿಕೊಂಡು, ತಾವು ನಿರೂಪಿಸುತ್ತಿರುವ ವಿಷಯಕ್ಕೆ ಪುಷ್ಟಿಯನ್ನು ನೀಡುತ್ತಾ, ಮನಕ್ಕೆ ತಾಗುವ ಹಾಗೆ ಹೇಳುವ ಒಂದು ವಿಶಿಷ್ಟ ಕಲೆ ಅವರದ್ದಾಗುದೆ. ಇವರ ಲೇಖನಗಳು ವಿಜಯಪುರದ ಪೂಜ್ಯ ಸಿದ್ದೇಶ್ವರ ಸ್ವಾಮೀಜಿಗಳ ಪ್ರವಚನಗಳ, ಗುರುರಾಜ ಕರ್ಜಗಿಯವರ ಕರುಣಾಳು ಬಾ ಬೆಳಕೆ, ಎಸ್ ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿ ಮುತ್ತು'ಗಳ ರೀತಿಯಲ್ಲಿ ಮನಸ್ಸನ್ನು ಹದ ಮಾಡುವ ಹಾಗೆ ರೂಪಿತವಾಗಿವೆ ಎನ್ನಬಹುದು. ಹೀಗೆ ಕಲಕೇರಿ ಅವರ ಬರಹವು ಶರಣರ, ಸಂತರ, ಸತ್ಪುರುಷರ ವಾಣಿಯ ಸಾಲಗಳ ಸಾರಸಂಗ್ರಹಿತ ಸಾಲುಗಳ ಸಾತತ್ಯ ಶಕ್ತಿಯ ಕಿರು ಬೆಳಕನ್ನು ತಮ್ಮದೇಯಾದ ಶೈಲಿಯಲ್ಲಿ ಕಟ್ಟಿಕೊಟ್ಟು ಉತ್ಸಾಹಿ ಮನಸ್ಸುಗಳ ಚೈತನ್ಯವನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಬದುಕಿನ ನೆಲೆಗಳು ಅರ್ಥ ಕಳೆದುಕೊಂಡು ಹಳಿತಾಗುತ್ತಿವೆ ಎನ್ನುವಾಗಲೆಲ್ಲಾ ಈ ತರಹದ ಲೇಖನಗಳು ಬದುಕಿನ ಮೌಲ್ಯ ಹೆಚ್ಚಾಗಲು ಕಾರಣಿಭೂತವಾಗಿ ಸಾಮಾನ್ಯರನ್ನು ಹಾಗೂ ಮತಿವಂತರನ್ನು ಏಕಕಾಲದಲ್ಲಿಯೇ ಗಮನ ಸೆಳೆಯುತ್ತವೆ.

ಆಧ್ಯಾತ್ಮಿಕತೆಯ ಬೆಳಕಿನ ಕಿರಣಗಳನ್ನು ಮಧ್ಯದಲ್ಲಿಟ್ಟುಕೊಂಡು ಮನೋವೈಜ್ಞಾನಿಕ ವಿಶ್ಲೇಷಣೆ ತೊಡಗುವುದಕ್ಕೆ ತಾದ್ಯಾತ್ಮಿಕತೆ ಹಾಗೂ ಚಿಕಿತ್ಸಕ ಗುಣ ಬೇಕಾಗುವುದು. ಇದು ವಚನಗಳ ಅನುಸಂಧಾನಿಗಳು ಪತ್ರಕರ್ತರು ಆದ ವೀರಣ್ಣ ರವರಲ್ಲಿ ಮೇಳೈಸಿದ ಕಾರಣ ಮನವನು ಬೆಳಗುವ ಲೇಖನಗಳು ಇಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಇಂದಿನ ವ್ಯವಸ್ಥೆಯಲ್ಲಿ ತನ್ನ ತಾ ಜಯಿಸಿಕೊಳ್ಳುವುದು ಅತೀ ಜರೂರಾಗಿದೆ, ಇದಕ್ಕೆ ದಾರಿ ನೂರಾರಿವೆ ಆದರೆ ಸ್ಪಷ್ಟವಾದ ದಾರಿ ಮಾತ್ರ ಇಂತಹ ಬರಹಗಳಲ್ಲಿ ಕಾಣಸಿಗುವುದು. ಇದನ್ನು ಓದಿಯೇ ದಕ್ಕಿಸಿಕೊಳ್ಳಬೇಕು. ಮೌಲ್ಯ ಮರೆಯಾಗಿ ಸತ್ಯ ಸರಿದು, ಮನಸ್ಸು ಕಸದ ಗೂಡಾಗುವ ಈ ಹೊತ್ತಿನಲ್ಲಿ ಮನಸ್ಸನ್ನು ರಿಲ್ಯಾಕ್ಸ್ ಮಾಡಿಕೊಳ್ಳಲೇಬೇಕಾದ ತುರ್ತಿನಲ್ಲಿ ನಾವು ಇದ್ದೇವೆ ನಮ್ಮ ತುರ್ತನ್ನು ಅರ್ಥಮಾಡಿಕೊಂಡು ಸಮಾಜಕ್ಕೆ ಕನ್ನಡಿ ಹಿಡಿಯುವ ಈ ಬರಹಗಳು ಬದುಕಿನಲ್ಲಿ ಶುಭ್ರಬೆಳಕು ಮೂಡಿಸಿವ ಹಂಬಲ ಹೊಂದಿವೆ. ಆ ಕಾರಣವಾಗಿ ಇವುಗಳನ್ನು ನೀವು ಓದಲೇಬೇಕು. ಆನಂತರವಾಗಿ ನಮ್ಮತನದ ಅಸ್ತಿತ್ವವನ್ನು ಗಟ್ಟಿಗೊಳಿಸಿ ಸಂಭ್ರಮ ಪಡಬಹುದಾಗಿದೆ. ಮನಸ್ಸು ಅರಿಯುವ ದಾರಿಯನ್ನು ತಮ್ಮ ಬರಹಗಳ ಮೂಲಕ ತೆ-ೋರಿದ ವೀರಣ್ಣ ಕಲಕೇರಿ ಅವರ ಅನುಭಾವಿಕ ನಡೆ ಬಹುದೂರ ಸಾಗಲಿ ಸಾಹಿತ್ಯ, ಸಂಗೀತ, ಸಂಸ್ಕೃತಿ ಹಾಗೂ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಅನುಭಾವದ ನೆಲೆಯ ಬರಹಗಳ ಮೂಲಕ ಮತ್ತಷ್ಟು ಮಹತ್ವಪೂರ್ಣ ಕೊಡುಗೆಯನ್ನು ನೀಡಲಿ ಎಂದು ಆಶಿಸುವೆ.



**ಮನು ಪತ್ತಾರ ವಿಜಯಪುರ**

# ಸಿಂಧನಕೇರಾ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಪೋಷಕರ ಶಿಕ್ಷಕರ ಸಭೆ



**ಮಲ್ಲಮ್ಮ ನುಡಿ ವಾರ್ತೆ**

**ಹುಮನಾಬಾದ:** ಪೋಷಕ-ಶಿಕ್ಷಕರ ಇಂದಿನ ಮಹಾಸಭೆಯಲ್ಲಿ ಸಂವಿಧಾನ ಪೀಠಿಕೆಯ ಓದು, ಪೋಷಕರಿಗೆ ಮಕ್ಕಳ ಕಲಿಕಾ ಪ್ರಗತಿ ಹಾಗೂ ಹಾಜರಾತಿ ಮಾಹಿತಿ, ಕಲಿಕಾ ಉಪಕ್ರಮಗಳು, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪೋಷಕರ ಪಾತ್ರ ಉತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳಿಗೆ ಅಭಿನಂದನೆ, ಪೋಷಕರಿಗೆ ಆರ್.ಟಿ.ಇ ಕಾಯ್ದೆ, ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣಾ ನೀತಿ ಪೋಕ್ಸೋ ಕಾಯ್ದೆ, ಬಾಲ್ಯವಿವಾಹ ನಿಷೇಧ, ಬಾಲಕಾರ್ಮಿಕ ನಿಷೇಧ ಮುಂತಾದ ವಿಚಾರಗಳ ಬಗ್ಗೆ ಎಲ್ಲಾ ಪೋಷಕರಿಗೆ ಅರಿವು ಮೂಡಿಸಲಾಗುತ್ತದೆ ಎಂದು ತಾಲ್ಲೂಕಿನ ಸಿಂಧನಕೇರಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೋಷಕರ ಶಿಕ್ಷಕರ ಮಹಾಸಭೆ ಕಾರ್ಯಕ್ರಮವನ್ನುದ್ದೇಶಿಸಿ ಸಮಾಜ ಶಿಕ್ಷಕಿ ಶ್ರೀಮತಿ ಚಂದ್ರಕಲಾ ಮಾತನಾಡುತ್ತಾ ತಿಳಿ ಹೇಳಿದರು. ಶಿಕ್ಷಣ ಪ್ರೇಮಿ ಭೀಮರೆಡ್ಡಿ ಸಿಂಧನಕೇರಾ ಮಾತನಾಡಿ, ನಮ್ಮ ದೇಶದ ಮೊದಲ ಪ್ರಧಾನಮಂತ್ರಿಗಳಾದ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ನಮಸ್ಕರಿಸುತ್ತಾ, ಶಿಕ್ಷಣದಲ್ಲಿ ಪೋಷಕರ ಸಭೆ ಮಹತ್ವದ್ದಾಗಿದ್ದು, ಪೋಷಕರು ಶಿಕ್ಷಕರೊಂದಿಗೆ ಸಂಪರ್ಕ ಸಾಧಿಸಲು ಮತ್ತು ತಮ್ಮ ಮಗುವಿನ ಶೈಕ್ಷಣಿಕ ಪ್ರಗತಿಯ ಬಗ್ಗೆ ಚರ್ಚಿಸಲು, ಮಗುವಿನ ಕಲಿಕಾ ಸಾಮರ್ಥ್ಯವನ್ನು ಬೆಂಬಲಿಸಲು ಕಲಿಕಾ ತಂತ್ರಗಳನ್ನು ಅಭಿವೃದ್ಧಿಪಡಿಸಲು ಅವಕಾಶವನ್ನು ಪಡೆಯುತ್ತಾರೆ. ಶೈಕ್ಷಣಿಕ ಫಲಿತಾಂಶ ಸುಧಾರಿಸಲು ಪಾಲಕರು ಮಕ್ಕಳಲ್ಲಿ ಸೃಜನಾತ್ಮಕ ಭಾವನೆ ಬೆಳೆಸುವುದು. ಮಕ್ಕಳು ಅಂಕಗಳಿಸುವ ಯಂತ್ರವಾಗದೆ, ಸಮಾಜದಲ್ಲಿ ಉತ್ತಮ ನಡತೆ ಸಂಸ್ಕಾರ ಬೆಳೆಸಿಕೊಂಡು ಕ್ರೀಡೆ, ಧಾರ್ಮಿಕ ಆಚಾರ ವಿಚಾರಗಳು ಇತರರ ಜೊತೆ ಹೊಂದಾಣಿಕೆ ಸರಳತೆಯೊಂದಿಗೆ ರಚನಾತ್ಮಕ ಕಾರ್ಯಗಳನ್ನು ಮೈಗೂಡಿಸಿಕೊಂಡಾಗ ಆತನ ಸರ್ವಾಂಗೀಣ ಬೆಳವಣಿಗೆಗೆ ಪಾಲಕರು ಅನುವು ಮಾಡಿಕೊಟ್ಟಂತಾಗುತ್ತದೆ ಎಂದರು. ಮಕ್ಕಳೇ ಕಷ್ಟಪಟ್ಟು ಓದಬೇಡಿ ಇಷ್ಟಪಟ್ಟು ಓದಿ ನೊಂದಿಗೆ ಮುಂದೆ ಬರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಮಕ್ಕಳಲ್ಲಿ ಇತರರ ವಿದ್ಯಾರ್ಥಿಗಳ ಜೊತೆ ಬೆರೆಯುವದನ್ನು ಕಲಿಸದಿದ್ದರೆ ಏಕಾಂಗಿತನ ಆತನ ಸಾಧನೆಗೆ ಅಡ್ಡಿಯಾದರೆ ದುರ್ಗುಣರ ಸಂಘ ಆತನ ಅವನತಿಗೆ ದಾರಿಯಾಗುತ್ತದೆ. ಇವತ್ತಿನ ದಿನ ಒಳ್ಳೆಯ ದಿನ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದಿರುವವರು ದೊಡ್ಡ ಅಧಿಕಾರಿಗಳಾಗಿದ್ದಾರೆ, ಹಾಗೆ ನಮ್ಮ ಗ್ರಾಮದ ಸರಕಾರಿ ಶಾಲೆಯಲ್ಲಿ ನೀವು ಕೂಡ ಓದುವ ಮುಖಾಂತರ ನಮ್ಮ ಗ್ರಾಮಕ್ಕೆ ಒಳ್ಳೆಯ ಕೀರ್ತಿ ತರಬೇಕು ಮತ್ತು ಈ ಶಾಲೆಯಲ್ಲಿ ಓದಿ ದೊಡ್ಡ ಅಧಿಕಾರಿಗಳಾಗಬೇಕು. ಮುಂದೆ ಬರುವ ದಿನಗಳಲ್ಲಿ ಸರಕಾರಿ ಶಾಲೆಯ ಹೆಸರು ನಾವೆಲ್ಲ ಸೇರಿ ಸರಕಾರಿ ಶಾಲೆ ಉಳಿಸೋಣ ಸರಕಾರಿ ಶಾಲೆ ಬೆಳೆಸೋಣ ಎಂದು ಭೀಮರೆಡ್ಡಿ ಸಿಂಧನಕೇರಾ ತಿಳಿಸಿದರು.

ಈ ಸಂದರ್ಭದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪೋಷಕ ಮತ್ತು ಶಿಕ್ಷಕರ ಸಭೆಯ ಅಧ್ಯಕರಾದ ರಮೇಶ್ ಸರ್, ಸಂತೋಷ್ ಸರ್, ಶ್ರೀಮತಿ ಸುನೀತಾ ಶಿಕ್ಷಕಿ, ಶ್ರೀಮತಿ ಪೂಜಾ ಶಿಕ್ಷಕಿ, ಹಾಗೂ ಗ್ರಾಮಸ್ಥರಾದ ಯುವರಾಜ್, ಶೇಕ್ ಫಿರ್ದೋಸ್, ಶಂಕರ್ ಶಿಲವಂತ್, ರಾಜು ಪಾಟೀಲ್, ಶಿವರಾಜ್ ಪಾಟೀಲ್, ಮಲ್ಲೇಶ್ ಮಿತ್ರ, ಪ್ರವೀಣ್ ಹೊಂಬಾಳೆ, ಶ್ರೀಧರ್ ಮೇತ್ರೆ ಶೇಕ್ ಸಾಜಿದ್ ಹಾಗೂ ಪೋಷಕರು, ವಿದ್ಯಾರ್ಥಿಗಳು ಇದ್ದರು.

# ಮಕ್ಕಳ ದಿನಾಚರಣೆ ಕಾರ್ಯಕ್ರಮ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ-ಪೋಷಕರ ಬಹುಮುಖ್ಯ ಪಾತ್ರ-ಸುಲ್ಪಿ

**ಮಲ್ಲಮ್ಮ ನುಡಿ ವಾರ್ತೆ**

**ಬಸವಕಲ್ಯಾಣ:** ಮಕ್ಕಳ ಉಜ್ವಲ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಜೊತೆಗೆ ಪೋಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ರಮೇಶ ಸುಲ್ಪಿ ಹೇಳಿದರು.



**ಬಸವಕಲ್ಯಾಣ: ನಗರದ ಶಾಂತಿನಿಕೇತನ ಶಾಲೆಯಲ್ಲಿ ಹಮ್ಮಿಕೊಂಡ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ತಾ.ಪಂ.ಕಾ.ನಿ.ಅ.ರಮೇಶ ಸುಲ್ಪಿ ಅವರು ವಿದ್ಯಾರ್ಥಿಗಳಿಗೆ ವಯಕ್ತಿಕವಾಗಿ ಬಹುಮಾನ ವಿತರಣೆ ಮಾಡಿದರು. ಶಾಲೆಯ ಸಿಬ್ಬಂದಿಗಳು ಇದ್ದರು.**

ನಗರದ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯಲ್ಲಿ ಶುಕ್ರವಾರ ಹಮ್ಮಿಕೊಂಡ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಶಾಲೆಯಲ್ಲಿ ಕಲಿಸುವ ಆಟ-ಪಾಠಗಳ ಬಗ್ಗೆ ಮಕ್ಕಳು ಮನೆಗೆ ಬಂದಾಗ ಪೋಷಕರು ವಿಚಾರಿಸಬೇಕು ಮತ್ತು ಅವರ ಚಲನ ವಲನಗಳ ಬಗ್ಗೆ ನಿವಾ ವಹಿಸಬೇಕು ಎಂದರು.

ವಿದ್ಯಾರ್ಥಿಗಳು ನೀವು ಓದುವ ಕೋಣೆಯಲ್ಲಿ ಮೋಬೈಲ್ ಮತ್ತು ಟಿವಿ ಉಪಯೋಗ ಮಾಡದೆ ಕೇವಲ ಪುಸ್ತಕ ಮಾತ್ರ ಸಂಗ್ರಹ ಮಾಡಿಟ್ಟುಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಮತ್ತು ಪ್ರತಿಯೊಬ್ಬರು ಉನ್ನತವಾದ ಕನಸುಗಳನ್ನು ಇಟ್ಟಿಕೊಂಡು ಅದಕ್ಕೆ ತಕ್ಕಂತೆ ಶ್ರಮ ಪಡಬೇಕು. ಅಂದಾಗ ಮಾತ್ರ ನಿಮ್ಮ ಜೀವನದ ಯಶಶ್ವಿದಡ ಸೇರಲು ಸಾಧ್ಯ ಎಂದರು.

ನಂತರ ಮಕ್ಕಳ ದಿನಾಚರಣೆ ಅಂಗವಾಗಿ ಶಾಲೆಯಲ್ಲಿ ರ್ರಡಿಸಿದ ವಿವಿಧ ಸ್ಪರ್ಧೆಗಳಲ್ಲಿ ಗೆಲವು ಸಾಧಿಸಿದ ಮತ್ತು ಅತಿಹೆಚ್ಚು ಅಂಕ ಪಡೆದ ವಿದ್ಯರ್ಥಿಗಳಿಗೆ ಇಒ ರಮೇಶ ಸುಲ್ಪಿ ಅವರು ವಯಕ್ತಿಕವಾಗಿ ಬಹುಮಾನಗಳು ವಿತರಿಸಿದರು. ಈ ಸಂದರ್ಭದಲ್ಲಿ ಸಿಆರ್‌ಪಿ ನಾಸೀರ ಪಟೇಲ್, ಪ್ರೌಢ ಶಾಲೆಯ ಮುಖ್ಯಗುರು ಚನ್ನವೀರ ಬಿರಾದಾರ್, ಪ್ರಾಥಮಿಕ ಶಾಲೆಯ ಮುಖ್ಯಗುರು ಶಿವರಾಜ ಖೇಲೆ ಹಾಗೂ ಐಇಸಿ ಸಂಯೋಜಕ ವೀರಾರೆಡ್ಡಿ ಸೇರಿದಂತೆ ಸಿಬ್ಬಂದಿ ಇದ್ದರು. ರೇಖಾ ಬೇಲೂರೆ ಸ್ವಾಗತಿಸಿದರು. ಮಲ್ಕಣ್ಣಾ ಮಸೂಟಿ ನಿರೂಪಿಸಿದರು. ಅಮರ ರಾಜಪೂತ ವಂದಿಸಿದರು.

# ತೋರಣಾ ಗ್ರಾಮಕ್ಕೆ ಅಧಿಕಾರಿಗಳ ಭೇಟಿ, ಗ್ರಾಮ ಪರಿಶೀಲನೆ

**ಮಲ್ಲಮ್ಮ ನುಡಿ ವಾರ್ತೆ**

**ಕಮಲನಗರ:** ತಾಲೂಕಿನ ಗಾಂಧಿ ಗ್ರಾಮ ಪುರಸ್ಕರತ ತೋರಣಾ ಗ್ರಾಮ ಪಂಚಾಯಿತಿ ಕಚೇರಿಗೆ ಪ್ರೊಬೇಷನರಿ ಐಎಎಸ್ ಅಧಿಕಾರಗಳಾದ ಪ್ರತಮೇಶ ಬರೋಡೆ, ಜಿನಿಯಾ ಅರೋರಾ, ಸ್ವಾತಿ ಜೈನ್, ರವಿ ಶ್ರೀವಾತ್ಸವ, ಪುಲಕೀತ ಬನ್ಸಲ್ ಮತ್ತು ಮಯಾಂಕ ಭಾಜಪೇಯಿ ಅವರುಗಳ ತಂಡ ಕ್ಷೇತ್ರ ಅಧ್ಯಯನ ಮತ್ತು ಸಂಶೋಧನೆ ನಿಮಿತ್ಯ ಗ್ರಾಮದಲ್ಲಿ ಮೂರು ದಿನ ಬಿಡು ಬಿಟ್ಟಿದ್ದರು. ಸ್ಥಳೀಯ ಜನರ ಸಮಸ್ಯೆಗಳನ್ನು ಆಲಿಸಿ ಆಗುವ



ತೊಂದರೆಗಳ ಬಗ್ಗೆ ಮಾಹಿತಿ ಪಡೆದು-ಕೊಂಡರು. ಜೀವನೋಪಾಯ ಮತ್ತು ಕೌಶಲ್ಯ ಅಭಿವೃದ್ಧಿ ಯೋಜನೆ ಕಾರ್ಯ ಚಟುವಟಿಕೆ ಮತ್ತು ಸ್ವಸಹಾಯ ಸಂಘದ ಮಹಿಳೆಯರ ಜತೆ ಚರ್ಚಿಸಿದರು. ಗ್ರಾಪಂ ಕಚೇರಿಗೆ ಭೇಟಿ ನೀಡಿದ ಅಧಿಕಾರಿಗಳ ತಂಡ ಉದ್ಯೋಗ ಖಾತರಿ ಯೋಜನೆ, ವಸತಿ ವಿತರಣೆ, ಸ್ವಚ್ಛ ಭಾರತ ಅಭಿಯಾನ, ಕುಡಿಯುವ ನೀರಿನ ಸರಬರಾಜು ಬಗ್ಗೆ ಪಿಡಿಒ ಮಲ್ಲೇಶ ಮಾರುತಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತಾಪಂ ಇಒ ಹಣಮಂತರಾಯ ಕೌಟಗೆ, ತಹಸೀಲ್ದಾರ್ ಅಮೀತ ಕುಮಾರ ಕುಲಕರ್ಣಿ, ಗ್ರಾಮ ಪಂಚಾಯತ ಅಧ್ಯಕ್ಷ ಸುನಿಲ ಶಿಗರೆ, ವ್ಯವಸ್ಥಾಪಕಿ ಕವಿತಾ ಬಿರಾದಾರ, ಎಂಬಿಕೆ, ಪಶು ಸಖಿ ಹಾಗೂ ಗ್ರಾಮಸ್ಥರು ಇದ್ದರು.

# ವಿವಿಧ ತರಬೇತಿಗೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ಯಾದಗಿರಿ:** ನ. 2024-25ನೇ ಸಾಲಿನ ಯಾದಗಿರಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆದಿಂದ ಉಚಿತವಾಗಿ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಯಾದಗಿರಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಿರ್ದೇಶಕ ತಿರುಮಲೇಶ್ ಅವರು ತಿಳಿಸಿದ್ದಾರೆ. ಡೆಸ್ಕ್‌ಟಾಪ್ ಪಬ್ಲಿಷಿಂಗ್ (ಮಳೆಯರು) 2025 ನವೆಂಬರ್ 11 ರಿಂದ ಡಿಸೆಂಬರ್ 25ರ ವರೆಗೆ 45 ದಿನ ಅವಧಿ ತರಬೇತಿ ಆಗಿರುತ್ತದೆ. ವಸ್ತ್ರ ಚಿತ್ರ ಕಲಾ ಉದ್ಯಮಿ (ಕಸೂತಿ ಮತ್ತು ಬಟ್ಟೆಯ ಚಿತ್ರಕಲೆ ಉದ್ಯಮಿ) 2025ರ ಡಿಸೆಂಬರ್ 15 ರಿಂದ 2026ರ ಜನವರಿ 13ರ ವರೆಗೆ 30 ದಿನ ಅವಧಿ ಇರುತ್ತದೆ. ಪೇಪರ್ ಬ್ಯಾಗ್‌ಗಳು ಲಕೋಟೆ ಮತ್ತು ಫೈಲ್ ತಯಾರಿಕೆ 2025ರ ಡಿಸೆಂಬರ್ 16 ರಿಂದ 25ರ ವರೆಗೆ 10 ದಿನ ಅವಧಿ ಇರುತ್ತದೆ. ಡೆಸ್ಕ್‌ಟಾಪ್ ಪಬ್ಲಿಷಿಂಗ್ (ಬಾಯ್ಸ್) 2025ರ ಡಿಸೆಂಬರ್ 28 ರಿಂದ 2026 ಫೆಬ್ರವರಿ 9ರ ವರೆಗೆ 45 ದಿನ ಅವಧಿ ಇರುತ್ತದೆ. ಕೃಷಿ ಉದ್ಯಮಿ 2026ರ ಜನವರಿ 5 ರಿಂದ 13ರ ವರೆಗೆ 13 ದಿನ ಇರುತ್ತದೆ. ಸೆಲ್ಫೋನ್ ರಿಪೇರಿ ಮತ್ತು ಸೇವೆ 2026ರ ಜನವರಿ 20 ರಿಂದ ಫೆಬ್ರವರಿ 18ರ ವರೆಗೆ 30 ದಿನ ಇರುತ್ತದೆ. ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್ 2026ರ ಫೆಬ್ರವರಿ 1 ರಿಂದ ಮಾರ್ಚ್ 17ರ ವರೆಗೆ 45 ದಿನ ಅವಧಿ ಆಗಿರುತ್ತದೆ. ಗ್ರಾಮೀಣ ಭಾಗದವರು ಆಗಿರಬೇಕು, ಬಿಪಿಎಲ್ ಎಎಪಿ, ಪಿಹೆಚ್‌ಹೆಚ್ ರೇಷನ್ ಕಾರ್ಡ್ ಕಡ್ಡಾಯವಾಗಿ ಇರಬೇಕು, ಊಟ ವಸತಿ ಸಹಿತ ಉಚಿತ ವಾಗಿರುತ್ತದೆ, 18 ರಿಂದ 45 ವರ್ಷ ಒಳಗಿರಬೇಕು, ಸಂಸ್ಥೆಯ ಸಮವಸ್ತ್ರ ಮತ್ತು ನೋಟು ಬುಕ್ ಪೆನ್ ಉಚಿತವಾಗಿ ನೀಡಲಾಗುತ್ತದೆ. ಮೇಲ್ಕಾಣಿಸಿದ ಎಲ್ಲಾ ತರಬೇತಿಗಾಗಿ ಸಂಸ್ಥೆ ಕಡೆಯಿಂದ ಮತ್ತು ಕೇಂದ್ರ ಸರ್ಕಾರ ಪ್ರಮಾಣ ಪತ್ರ ನೀಡಲಾಗುತ್ತದೆ. ಬಿಪಿಎಲ್, ಎಎಪಿ, ಪಿಹೆಚ್‌ಹೆಚ್ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಅಂಕಪಟ್ಟಿ ಪ್ರಮಾಣ ಪತ್ರ, ಟಿಸಿ ಪ್ರಮಾಣ ಪತ್ರ ಪ್ರತಿ ಲಗತ್ತಿಸಬೇಕು, 4 ಪಾಸ್ ಮೊದಲು ಬಂದ 35 ಅರ್ಜಿಗಳು ಮಾತ್ರ ತರಬೇತಿಗೆ ತೆಗೆದುಕೊಳ್ಳಲಾಗುವುದು, 2025ರ ನವೆಂಬರ್ 20ರ ಒಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ನಂ.9880666117,8088235941,9483236840,9008423316ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಗರದಲ್ಲಿ ಮಕ್ಕಳ ದಿನಾಚರಣೆ ಹಾಗೂ ಪೋಷಕರ -ಶಿಕ್ಷಕರ ಮಹಾಸಭೆ ಕಾರ್ಯಕ್ರಮ ಉದ್ಘಾಟನೆ

## ಗುಣಾತ್ಮಕ ಶಿಕ್ಷಣ ಹಾಗೂ ಶೈಕ್ಷಣಿಕ ವ್ಯವಸ್ಥೆ ಸುಧಾರಣೆಗೆ ಪೋಷಕರ - ಶಿಕ್ಷಕರ ಮಹಾಸಭೆ ಸಹಕಾರಿ

**ಮಲ್ಲಮ್ಮ ನುಡಿ ವಾರ್ತೆ**

**ಯಾದಗಿರಿ:ನ:** ಮಕ್ಕಳ ಆರೋಗ್ಯ, ಗುಣಾತ್ಮಕ ಶಿಕ್ಷಣ, ಹಾಜರಾತಿ ಹೆಚ್ಚಳ ಹಾಗೂ ಶೈಕ್ಷಣಿಕ ವ್ಯವಸ್ಥೆ ಸುಧಾರಣೆಗೆ ಪೋಷಕರ-ಶಿಕ್ಷಕರ ಮಹಾಸಭೆ ಹೆಚ್ಚು ಸಹಕಾರಿಯಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರಾದ ರಾಹುಲ್ ಪಾಂಡ್ವೆ ಅವರು ಹೇಳಿದರು. ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಇಂದು ಮಾಜಿ ಪ್ರಧಾನಿ, ದೇಶದ ಮೊದಲ ಪ್ರಧಾನಿ ದಿ.ಜವಾಹರಲಾಲ್ ನೆಹರು ಅವರ ಜಯಂತಿ ಅಂಗವಾಗಿ ಮಕ್ಕಳ ದಿನಾಚರಣೆ ಹಾಗೂ ಪೋಷಕರು ಹಾಗೂ ಶಿಕ್ಷಕರ ಮಹಾಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರವು ಶೈಕ್ಷಣಿಕ ವ್ಯವಸ್ಥೆ ಸುಧಾರಣೆಗೆ ಹಲವು. ಕ್ರಮಗಳನ್ನು ಕೈಗೊಳ್ಳುತ್ತಿದೆ. ಭವಿಷ್ಯದಲ್ಲಿ ಗುಣಾತ್ಮಕ ಶಿಕ್ಷಣ ಒದಗಿಸುವುದು, ಈಗಿರುವ ವ್ಯವಸ್ಥೆಗಳ ಬಗ್ಗೆ ಚರ್ಚೆಗಾಗಿ ಪೋಷಕರು ಹಾಗೂ ಶಿಕ್ಷಕರ ಮಹಾಸಭೆ ಏರ್ಪಡಿಸಿದ್ದು, ಇದರ ಸದುಪಯೋಗ ಪಡೆಯಬೇಕು. ಸರ್ಕಾರದ ಸೌಲಭ್ಯಗಳ ಲಾಭ ಪಡೆಯುವ ಜೊತೆಗೆ ಶಿಕ್ಷಣದಲ್ಲಿ





,ಶಿಸ್ತುಬದ್ಧತೆ ತರುವಂತೆ ಅವರು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಮಾತನಾಡಿ, ಶಿಕ್ಷಣ ಕ್ಷೇತ್ರದ ಸುಧಾರಣೆ, ಬದಲಾವಣೆಯ ಮುಖ್ಯ ಭಾಗ ಈ ಮಹಾಸಭೆ ಯಾಗಿದೆ. ಶಿಕ್ಷಕರು, ಪೋಷಕರು, ಮಕ್ಕಳ ಮಧ್ಯೆ ಸಮನ್ವಯತೆ ಸಾಧಿಸಿ ಗುಣಾತ್ಮಕ ಶಿಕ್ಷಣಕ್ಕೆ ಇದು ನೆರವಾಗಲಿದೆ ಎಂದು ಹೇಳಿದರು.

ಜಿ.ಪಂ ಸಿಇಒ ರವೀಶ್ ಒರಡಿಯಾ ಅವರು ಶಿಕ್ಷಕರು, ಪೋಷಕರು, ಹಾಗೂ ಸಮುದಾಯದವರೆಲ್ಲರೂ ಕೂಡಿ ಶಿಕ್ಷಣ ವ್ಯವಸ್ಥೆ ಸುಧಾರಣೆಗೆ ಮುಂದಾಗುವಂತೆ ಸಲಹೆ ನೀಡಿದರು.

ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀ ಮರಿಯಪ್ಪ ಅವರು, ಅತ್ಯಂತ ಸೌಮ್ಯ ವರ್ಗಗಳಾದ ಮಹಿಳೆಯರು ಹಾಗೂ ಮಕ್ಕಳ ಮೇಲೆ ಹೆಚ್ಚು ದೌರ್ಜನ್ಯ ನಡೆಯುತ್ತಿವೆ. ಇದಕ್ಕಾಗಿ ಭ್ರೂಣ ಹತ್ಯೆ ಹಾಗೂ ಪತ್ತೆ ನಿಷೇಧ ಕಾಯ್ದೆ, ಮಕ್ಕಳ ಜನನ ಮರಣ ನೋಂದಣಿ ಕಾಯ್ದೆ, ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ, ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಗಳು ಜಾರಿಯಲ್ಲಿವೆ. ಪೋಷಕರನ್ನು ಭಯದ ವಾತಾವರಣದಿಂದ ಹೊರತರಲು ಮಕ್ಕಳು ಅತ್ಯುತ್ತಮ ವಿದ್ಯಾರ್ಥಿಗಳಾಗಿ ಸಾಧನೆಗೈಯ್ಯಬೇಕು. ಮೋಬೈಲ್ ವ್ಯಸನದಿಂದ ದೂರ ಇರುವಂತೆ ಕರೆ ನೀಡಿದರು.

ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಲ್ಲಿ ನಡೆದ ಮಕ್ಕಳ ದಿನಾಚರಣೆ ಹಾಗೂ ಪೋಷಕರ-ಶಿಕ್ಷಕರ ಮಹಾಸಭೆ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ರಾಜ್ಯದ ಎಲ್ಲ ಶಾಲಾ, ಕಾಲೇಜು ಪೋಷಕರ-ಶಿಕ್ಷಕರ ಮಹಾಸಭೆ ಅಂಗವಾಗಿ ಆನ್ಲೈನ್ ಮೂಲಕ ಪಾಲಕರು ಹಾಗೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಡಿಡಿಪಿಯು ಪಂಡಿತರಾವ್ ಪವಾರ್, ಮಕ್ಕಳ ರಕ್ಷಣಾಧಿಕಾರಿ ನಿರ್ಮಲ ಮಾತನಾಡಿದರು. ಡಯಟ್ ಪ್ರಾಂಶುಪಾಲ ವೃಷಬೇಂದ್ರ, ಎಸ್ ಡಿ ಎಮ್. ಸಿ ಅಧ್ಯಕ್ಷ ರಾಠೋಡ ಉಪಸ್ಥಿತರಿದ್ದರು.

ಡಿಡಿಪಿಐ ಚನ್ನಬಸಪ್ಪ ಮುಧೋಳ ಸ್ವಾಗತಿಸಿದರು. ಶಿಕ್ಷಕರಾದ ಶ್ರೀಮತಿ ಎಲಿಜಾ ಬ.ಬಳಿಗೇರಿ ಕಾರ್ಯಕ್ರಮ ನಿರೂಪಿಸಿದರು. ಮಕ್ಕಳು ಇದೇ ಸಂದರ್ಭದಲ್ಲಿ ಸಂವಿಧಾನದ ಪೀಠಿಕೆ ವಾಚನ ಮಾಡಿದರು.

# ಕಬ್ಬು ಟ್ರ್ಯಾಕ್ಟರ್ ಗಳಿಗೆ ಬೆಂಕಿ ರೈತರ ಹೋರಾಟ ಧಮನದ ಹುನ್ನಾರ– ಚಾಮರಾಸ ಮಾಲಿಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

**ರಾಯಚೂರು:** ನ. 14–ಕಬ್ಬಿಗೆ ಸಮರ್ಪಕ ದರ ನೀಡಬೇಕೆಂದು ಆಗ್ರಹಿಸಿ ರೈತರ ನಡೆಸುತ್ತಿರುವ ಹೋರಾಟವನ್ನುಹತ್ತಿಕ್ಕುವಉದ್ದೇಶದಿಂದ ಕಬ್ಬು ಕಾರ್ಖಾನೆಗಳ ಮಾಲೀಕರು ರೈತರ ಟ್ರ್ಯಾಕ್ಟರ್ ಗಳಿಗೆ ಬೆಂಕಿ ಹಚ್ಚಿ ಕೃತ್ಯವಸೆಗಿದ್ದು, ಇದನ್ನುಸಮಗ್ರತನಿಖೆ ಕೈಗೊಂಡು ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರೈತ ಹೋರಾಟಗಾರ ಚಾಮರಾಸ ಮಾಲಿಪಾಟೀಲ್ ಅವರು ರಾಜ್ಯ ಸರಕಾರಕ್ಕೆಆಗ್ರಹಿಸಿದರು. ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಕಳೆದ ಒಂದು ವಾರದ ಅಧಿಕ ದಿನಗಳಿಂದ ಪ್ರತಿ ಟೆನ್ ಕಬ್ಬುಗೆ 3500 ರೂ ಬೆಂಬಲ ಬೆಲೆ ನೀಡುವಂತೆ ರೈತರ ಹೋರಾಟ ನಿರಂತರವಾಗಿನಡೆಸಲಾಗುತ್ತಿದೆ.ರಾಜ್ಯ ಸರ್ಕಾರ ಗೊಂದಲ ಸೃಷ್ಟಿಯಿಂದ ಕಬ್ಬು ಕಾರ್ಖಾನೆಗಳ ಮಾಲೀಕರ ಜೊತೆಗೂಡಿ ರೈತರ ಹೋರಾಟವನ್ನು ಧಮನಿಗೊಳಿಸುವ ಕೃತ್ಯ ಇದಾಗಿದೆ.

ಬಾಗಲಕೋಟಯ ಮುಧೋಳ ಭಾಗದಲ್ಲಿ ರೈತರು ನಡೆಸುತ್ತಿರುವ ಹೋರಾಟದಲ್ಲಿಕಾರ್ಖಾನೆಮಾಲೀಕರ ಕುಮ್ಮಕ್ಕನಿಂದ ದುಷ್ಕರ್ಮಿಗಳು ಕಬ್ಬು ಹೊತ್ತ100 ಬೆಂಕಿಗಾಹುತಿಯಾಗಿವೆ. ಅತಿವೃಷ್ಟಿ ಮಳೆಯಿಂದ ಈಗಾಗಲೇ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರ



ನೆರವಿಗೆ ಧಾವಿಸಬೇಕಾದ ರಾಜ್ಯ ಸರ್ಕಾರ ಕಬ್ಬು ಕಾರ್ಖಾನೆಗಳ ಮಾಲೀಕರ ಜೊತೆಗೂಡಿ ರೈತರ ಕಬ್ಬು ಟ್ರ್ಯಾಕ್ಟರ್ ಗಳಿಗೆ ಬೆಂಕಿ ಹಚ್ಚುವುದರ ಮೂಲಕ ರೈತರು ಮತ್ತು ಇಷ್ಟು ಆರ್ಥಿಕ ಸಂಕಷ್ಟ ಗುರಿಯಾಗುವಂತೆ ಮಾಡುವ ಕೃತ್ಯ ಅತ್ಯಂತ ಖಂಡನೀಯ. ರೈತರು ಎಂದಿಗೂ ಈ ಕೃತ್ಯ ವೇಸಿಗಳು ಸಾಧ್ಯವಿಲ್ಲ.ರೈತರ ಹೋರಾಟವನ್ನು ದಮನಗೊಳಿಸುವ ಉದ್ದೇಶದಿಂದ ಕೃತ್ಯ ಮಾಡಲಾಗಿದೆ ಎಂದು ಆರೋಪಿಸಿದರು. ರಾಜ್ಯ ಸರ್ಕಾರ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಕಬ್ಬು ಟ್ರ್ಯಾಕ್ಟರ್ ಗಳಿಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಪೊಲೀಸರು ಹಾಗೂ ಕಾರ್ಖಾನೆ ಮಾಲೀಕರು ರೈತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದರೆ ರಾಜ್ಯದ್ಯಂತ ಹೋರಾಟ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಯಚೂರು ಜಿಲ್ಲೆಯಲ್ಲಿ 5 ಲಕ್ಷ 5 ಸಾವಿರ ಎಕರೆ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಬೆಳೆಯಲಾಗಿದೆ. ಆದರೆ ರೈತರಿಗೆ ಹತ್ತಿ ಖರೀದಿಯಲ್ಲಿ ವಂಚನೆ ಮಾಡಲಾಗುತ್ತಿದೆ. ಇಷ್ಟೆಲ್ಲ ಸಮಸ್ಯೆಗಳುರೈತರು ಎದುರುಸುತ್ತಿದ್ದರು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇಲ್ಲಿನ ಜನಪ್ರತಿನಿದಿನಗಳಿಗೆ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಹತ್ತಿ ಖರೀದಿಯಲ್ಲಿ ರೈತರಿಗೆ ಮೋಸ, ಅತಿವೃಷ್ಟಿಯಿಂದ ಬೆಳೆ ನಷ್ಟಪರಿಹಾರ ನೀಡುವಲ್ಲಿ ವಿಳಂಬ ಹಾಗೂ ಫಸಲು ಯೋಜನೆಯಡಿ ನಡೆದ ಅಕ್ರಮವನ್ನು ಜಿಲ್ಲಾಡಳಿತ ರೈತರನ್ನು ಹಾಗೂ ಹತ್ತಿ ಖರೀದಿ ಮಾಲೀಕರನ್ನು ಜಿಲ್ಲೆಯ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳ ನ.21 ಒಳಗಡೆ ಸಭೆ ಕರೆಯಬೇಕು. ಇಲ್ಲದಿದ್ದರೆ ನ. 21 ರಂದು ಜಿಲ್ಲಾಧಿಕಾರಿ ಕಚೇರಿ ಮುಂದೆ ಬೃಹತ್ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.ಈ ಸಂದರ್ಭದಲ್ಲಿ ಬೂದೆಯ್ಯ ಸ್ವಾಮಿ, ದೇವರಾಜ ನಾಯಕ, ರೈತ ಮುಖಂಡರು

## ಸಕ್ಕರೆ ಖಾಯಿಲೆಯ ನಿಯಂತ್ರಣ ಜಾಗೃತಿ ಸೈಕ್ಲಿಂಗ್ ಜಾಥಾ



ಮಲ್ಲಮ್ಮ ನುಡಿ ವಾರ್ತೆ

**ರಾಯಚೂರು:** ನಗರದ ಲಿಂಗಸಗೂರ ರಸ್ತೆಯಲ್ಲಿರುವ ಬಸವ ಆಸ್ಪತ್ರೆಯಿಂದ ವಿಶ್ವ ಸಕ್ಕರೆ ಖಾಯಿಲೆ ನಿಯಂತ್ರಣ ದಿನಾಚರಣೆ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಡಯಾಬೆಟಿಕ್ ಅಸೋಶಿಯೇಷನ್, ರಿಮ್ಸ್ ಮೆಡಿಕಲ್ ಕಾಲೇಜ ಅಸೋಶಿಯೇಷನ್, ರಾಯಚೂರು ಸೈಕ್ಲಿಂಗ್ ಅಸೋಶಿಯೇಷನ್ ವತಿಯಿಂದ ಬಸವ ಆಸ್ಪತ್ರೆಯ ಮುಖ್ಯಸ್ತರು, ಕರ್ನಾಟಕ ರಾಜ್ಯ ಡಯಾಬೆಟೀಕ್ ಅಸೋಶಿಯೇಷನ್ ರಾಜ್ಯಾಧ್ಯಕ್ಷರಾದ ಡಾ. ಬಸವರಾಜ ಎಂ. ಪಾಟೀಲರವರ ಅಧ್ಯಕ್ಷತೆಯಲ್ಲಿ ನಗರದ ಮುಖ್ಯ ರಸ್ತೆಗಳ ಮೂಲಕ ಸಕ್ಕರೆ ಖಾಯಿಲೆಯ ನಿಯಂತ್ರಣ ಜಾಗೃತಿ ಸೈಕ್ಲಿಂಗ್ ಜಾಥಾ ಕಾರ್ಯಕ್ರಮವನ್ನುಹಮ್ಮಿಕೊಳ್ಳಲಾಗಿತ್ತು, ಮಕ್ಕಳ ದಿನಾಚರಣೆಯ ಅಂಗವಾಗಿ ಬೆಟ್ಟದೂರು ಆಸ್ಪತ್ರೆ ಮುಖ್ಯಸ್ಥ ಡಾ. ಜಯಪ್ರಕಾಶ ಪಾಟೀಲವರ ಪುತ್ರ ಅನಿಕೇತರವರು ಧ್ವಜವನ್ನು ತೋರಿಸುವ ಮುಖಾಂತರ ಜಾಥಾಕ್ಕೆ ಚಾಲನೆ ನೀಡಿದರು.

ಸೈಕ್ಲಿಂಗ್ ಜಾಗೃತಿ ಜಾಥಾವು ಬಸವ ಆಸ್ಪತ್ರೆಯಿಂದ ಪ್ರಾರಂಭಗೊಂಡು ಜಿಲ್ಲಾಧಿಕಾರಿಗಳ ಬಂಗಲೆಯ ಮುಖಾಂತರ ಬಸವೇಶ್ವರ ವೃತ್ತ, ಬಸವೇಶ್ವರ ರಸ್ತೆ, ಮಹಾತ್ಮಾ ಗಾಂಧಿ ವೃತ್ತ, ಚಂದ್ರಮೌಳೇಶ್ವರ ವೃತ್ತ, ಮಹಾವೀರ ವೃತ್ತ, ತರಕಾರಿ ಮಾರುಕಟ್ಟೆ, ಬಟ್ಟೆ ಬಜಾರ, ಕಲ್ಲಾನೆ ತೀನ್ ಕಂದೀಲ್ ವೃತ್ತ, ಶೆಟ್ಟಿಭಾವಿ ವೃತ್ತ, ಬಿ.ಆರ್.ಬಿ. ವೃತ್ತ, ಆರ್.ಟಿ.ಓ. ವೃತ್ತ, ಆಕಾಶವಾಣಿ ರಸ್ತೆ, ಮಂತ್ರಾಲಯ ರಸ್ತೆ, ರಾಮಲಿಂಗೇಶ್ವರ ರಸ್ತೆ, ರೈಲ್ವೇ ಸ್ಟೇಷನ್ ರಸ್ತೆ, ಪಂ. ಸಿದ್ದರಾಮ ಜಂಬಲದಿನ್ನಿ ರಸ್ತೆಯ ಮೂಲಕ ಆಗಮಿಸಿ ಡಾ. ಬಿ.ಆರ್. ಅಂಬೇಡ್ಕರ ವೃತ್ತಕ್ಕೆ ಮುಕ್ತಾಯವಾಯಿತು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಕರ್ನಾಟಕ ರಾಜ್ಯ ಡಯಾಬೆಟಿಕ್ ಅಸೋಶಿಯೇಷನ್ ರಾಜ್ಯಾಧ್ಯಕ್ಷರಾದ ಡಾ. ಬಸವರಾಜ ಎಂ. ಪಾಟೀಲರವರು ಡಯಾಬೆಟಿಕ್ ಅಂದ್ರೆ ಸಕ್ಕರೆ ಖಾಯಿಲೆ ಎಂಬುದು ಪ್ರಸ್ತುತ ದಿನಮಾನಗಳಲ್ಲಿ ಸರ್ವೇ ಸಾಮನ್ಯವಾಗಿ ಬರುವಂತ ಖಾಯಿಲೆಯಾಗಿರುತ್ತದೆ, ಅದಕ್ಕಾಗಿ ಸಾರ್ವಜನಿಕರು ಹೆದರಬೇಕಾಗಿಲ್ಲ ಎಚ್ಚರವಹಿಸಿ ನಿತ್ಯವೂ ಆದಸ್ಟು ಹೆಚ್ಚು ಸಮಯ ಆರೋಗ್ಯಕರವಾದ ನಿದ್ದೆ ಮಾಡುವುದು, ನಿದ್ದೆಯಿಂದ ಎದ್ದ ತಕ್ಷಣ ವ್ಯಾಯಾಮ, ಯೋಗ, ಮೆಡಿಟೇಶಿನ್ ಅಥವಾ ಧ್ಯಾನ ಮಾಡುವುದು ಮತ್ತು ಊಟದ ಸಮಯದಲ್ಲಿ ಯಾವುದೇ ತರಹದ ಮೊಬೆಲ್ ಬಳಕೆ ಮಾಡುತ್ತ ಊಟದ ಕಡೆ ಗಮನಕೊಡದೇ ಮೊಬೈಲ್ ನಲ್ಲೇ ಲೀನರಾಗಿ ಊಟ ಸೇವಿಸುವುದರಿಂದ ಸೇವಿಸಿದಂತ ಪದಾರ್ಥ ಸರಿಯಾಗಿ ಜೀರ್ಣವಾಗದೇ ಇರುವುದು ಇರುತ್ತದೆ, ಅದಕ್ಕಾಗಿ ನಿದ್ದೆ ಮತ್ತು ಊಟದ ಸಮಯದಲ್ಲಿ ಮೊಬೆಲ್ ಬಳಕೆಯನ್ನು ಆದಸ್ಟು ದೂರ ಮಾಡುವುದು ಅತೀ ಅವಶ್ಯವಾಗಿದೆ.

ಮನುಷ್ಯನಲ್ಲಿ ಕೋಟಿಗಟ್ಟಲೆ ಹಣ, ಅಂತಸ್ತಿನ ಕಟ್ಟಡವಿದ್ದರೂ ಕೂಡ ಆತನಲ್ಲಿ ಯಾವುದೇ ಖಾಯಿಲೆಯಿಂದ ಬಳಲುತ್ತಿದ್ದರೆ ಎಲ್ಲವೂ ವ್ಯರ್ಥವಾಗುತ್ತದೆ, ಆದುದರಿಂದ ಮನುಷ್ಯನಿಗೆ ಬೇಕಾಗಿರುವುದು ಮೊದಲು ಆರೋಗ್ಯ ಆದುದರಿಂದ ಸರ್ವರೂ ಸರಿಯಾದ ನಿದ್ದೆ, ವ್ಯಾಯಾಮ, ಯೋಗ, ಧ್ಯಾನಗಳನ್ನು ಮಾಡುವ ಮೂಲಕ ಸಕ್ಕರೆ ಖಾಯಿಲೆಯಿಂದ ದೂರವಿರಬೇಕು ಹಾಗೇ ಯಾರೂ ಕೂಡ ಹೆದಬೇಕಾಗಿಲ್ಲ ಎಚ್ಚರವಹಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ಸಕಲೇಶ ಪಾಟೀಲ, ಡಾ. ಸುನಿಲ ಕುಮಾರ, ಡಾ. ಮಂಜುನಾಥ ಹಟ್ಟಿ ಡಾ. ಶರಣಗೌಡ ಪಾಟೀಲ, ವಿಶ್ವನಾಥ ಹಿರೇಮಠ, ರವಿಕುಮಾರ ಗಣೇಕಲ, ಪವನ ಕುಮಾರ, ಸಂದೀಪ ಕಲ್ಲೂರ, ವಿಜಯ ದೋಮುಕುಂಟಿ, ಪ್ರವೀಣ ಚೂಡಿ, ಪವನ ಮುದ್ದೆನೂರ, ಚನ್ನಪ್ಪಗೌಡ ಮಿರ್ಜಾಪುರ, ರಘು ಚಿತ್ರಾಲ, ಗುರುರಾಜ ಚಿತ್ರಾಲ, ವೆಂಕಟೇಶ ಗದ್ದೆ, ನಾಗರಾಜ ಗದಲೇ ರಾಘವೇಂದ್ರ ಗುಪ್ತ, ಸೋಮನಾಥ ವಕೀಲರು, ನೆಲಹಾಳ ವೀರೇಶ, ಹಾಗೂ ರಾಯಚೂರು ಸೈಕಲ್ ಅಸೋಸಿಯನ್ಸ್‌ನ ಸರ್ವ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಜಿಲ್ಲಾ ಆರೋಗ್ಯ ನಿರೀಕ್ಷೆನಾಧಿಕಾರಿಯವರ ಸಮಸ್ಯೆ ಬಗೆಹರಿಸಲು ಪ್ರಯತ್ನ –ಸಿಎಸ್ ಷಡಕ್ಷರಿ



ಮಲ್ಲಮ್ಮ ನುಡಿ ವಾರ್ತೆ

**ರಾಯಚೂರು:** ನ.14–ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ ಎಸ್ ಷಡಕ್ಷರಿ ರವರಿಗೆಅಭಿನಂದನಕಾರ್ಯಕ್ರಮವನ್ನು ನಗರದ ಕೃಷಿ ವಿಶ್ವವಿದ್ಯಾಲಯದ ಪ್ರೇಕ್ಷ ಗೃಹದಲ್ಲಿ ಅದ್ದೂರಿಯಾಗಿ ಜರಗಿಸಲಾಯತು.ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯನಿರೀಕ್ಷೆನಾಧಿಕಾರಿಯ ಸಂಘದ ಜಿಲ್ಲಾಧ್ಯಕ್ಷರಾದ ಸುರೇಶ್ ಬಂಡಾರಿ ಮತ್ತು ಸಂಘದ ಇತರೆ ಪದಾಧಿಕಾರಿ ಅವರ ಜೊತೆಗೆ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಹವಾಲುಗಳನ್ನುನೀಡಲಾಯಿತುಆರೋಗ್ಯ ನಿರೀಕ್ಷಣಾಧಿಕಾರಿಗಳ ಅವರ ಕರ್ತವವನ್ನುಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ ಉಪಕೇಂದ್ರಗಳನ್ನು ನಂಜುಂಡಪ್ಪ ವರದಿಯಂತೆ ಹೆಚ್ಚಿಸಬೇಕು ಗ್ರಾಮೀಣ ಮಟ್ಟದಲ್ಲಿ ಅಂತರ್ಜಾಲ ತೊಂದರೆ ಇರುವುದರಿಂದ ಗ್ರಾಮೀಣ ಮಟ್ಟದಲ್ಲಿನ ಆರೋಗ್ಯನಿರೀಕ್ಷಣಾಧಿಕಾರಿಯವರಿಗೆ ಅಂತರ್ಜಾಲ ಹಾಜರಾತಿಯಿಂದ ಕೆ ಏಎಂಎಸ್ ವಿನಾಯಿತಿ ನೀಡುವುದು ಕಲ್ಯಾಣ ಕರ್ನಾಟಕ ಭಾಗದ ನಮ್ಮ ವೃದ್ಧದವರಿಗೆ ಪದನೊತಿ ಕೈಬಿಟ್ಟಿರುವ ಮಲತಾಯಿ ಧೋರಣೆಯನ್ನುಮಾಡದೆ ನಮ್ಮ ಭಾಗದ ವೃಂದದವರೆಗೂ ಸಹ ಪದೋನ್ನತಿ ನೀಡುವುದು ಕಲ್ಯಾಣ ಕರ್ನಾಟಕ ಭಾಗವು ಅತಿ ಹಿಂದುಳಿದ ಪ್ರದೇಶವಾಗಿರುವುದರಿಂದ ವರ್ಗಾವಣೆ ಪ್ರಕ್ರಿಯೆಯಲ್ಲಿ ನಿರ್ಣಯಕ ನಿರ್ಣೇಕವಲ್ಲದ ಕ್ರಿಟಿಕಲ್ ಮತ್ತು ನಾನ್ ಕ್ರಿಟಿಕಲ್ ಕ್ರಮದ ಸರಕಾರದ ಆದೇಶವನ್ನು ಹಿಂಪಡೆಯುವ ಬಗ್ಗೆ ಹಾಗೂ ಇತರೆ ಕುಂದುಕೊರತೆಗಳ ಬಗ್ಗೆ ಚರ್ಚಿಸಲಾಯಿತು ಆರೋಗ್ಯ ನಿರೀಕ್ಷಣಾಧಿಕಾರಿಯವರ ಕೊಂದು ಕೊರತೆಗಳ ಬಗ್ಗೆ ಚರ್ಚೆಯ ನಂತರ ಕರ್ನಾಟಕದ ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯ ಅಧ್ಯಕ್ಷರಾದ ಸಿ ಎಸ್ ಷಡಕ್ಷರಿ ಅವರು ಹಾಗೂ ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆಯ ಎಲ್ಲಾ ವೃಂದಗಳ ರಾಜ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ ಬಳ್ಳಾರಿಯವರ ಸಮ್ಮುಖದಲ್ಲಿ ಎಲ್ಲಾ ಕುಂದು ಕೊರತೆಗಳನ್ನು ಬಗೆಹರಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಚರ್ಚಿಸಿ ಪರಿಹಾರ ಒದಗಿಸುವದಾಗಿ ಭರವಸೆ ನೀಡಲಾಯಿತು ಈ ಕುಂದು ಕೊರತೆಯ ಸಭೆಯಲ್ಲಿ ರಾಜ್ಯ ಸರಕಾರಿ ನೌಕರ ಸಂಘದ ರಾಯಚೂರು ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತಿಗೆರ ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿಯ ಸಂಘದ ಅಧ್ಯಕ್ಷರಾದ ಸುರೇಶ ಭಂಡಾರಿ ಜಿಲ್ಲಾ ಗೌರವ ಸಲಹೆಗಾರರಾದ ಕೆ ತಾಯಪ್ಪ ಬದ್ದೆಪಲ್ಲಿ ಹಾಗೂ ಸಂಘದ ಇತರೆ ಎಲ್ಲಾ ಪದಾಧಿಕಾರಿಗಳು ಹಾಜರಿದ್ದು ಹಾಗೂ ಈ ಕಾರ್ಯಕ್ರಮ ಯಶಸ್ವಿಗೆ ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಆರೋಗ್ಯ ಇಲಾಖೆಯ ಎಲ್ಲಾ ವೃಂದದ ನೌಕರಿಗೆ ಜಿಲ್ಲಾ ಆರೋಗ್ಯನಿರೀಕ್ಷೆನಾಧಿಕಾರಿಯ ಸಂಘದ ವತಿಯಿಂದ ತುಂಬು ಹೃದಯದ ಧನ್ಯವಾದಗಳು ತಿಳಿಸಲಾಯಿತು.

## ಕಾಲೇಜು ವಿದ್ಯಾರ್ಥಿಗಳಿಗೆ ಕಾನೂನು ಜ್ಞಾನ ಅತ್ಯಗತ್ಯ

ಮಲ್ಲಮ್ಮ ನುಡಿ ವಾರ್ತೆ

**ರಾಯಚೂರು:** ನವೆಂಬರ್ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕಾನೂನು ಜ್ಞಾನ ಇರಲೇಬೇಕು. ಕಾನೂನು ಸೇವಾ ಪ್ರಾಧಿಕಾರದ ಬಗ್ಗೆ ಮಾಹಿತಿ ಇರಬೇಕು. ವಿದ್ಯಾರ್ಥಿಗಳ ಕ್ಲಬ್ ರಚಿಸಿ ಅಥವಾ ಎನ್ಎಸ್ಎಸ್ ಕ್ಯಾಂಪ್‌ಗಳ ಮುಖಾಂತರ ಹಳ್ಳಿಗಳಿಗೆ ಹೋಗಿ ಕಾನೂನು ಅರಿವು ಮೂಡಿಸುವ ಕಾರ್ಯ ಕಾಲೇಜುಗಳು ಮತ್ತು ವಿವಿಗಳಲ್ಲಿ ಆಗಬೇಕು ಎಂದು ಗೌರವಾನ್ವಿತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶಶಿಧರ ಶೆಟ್ಟಿ ಅವರು ಹೇಳಿದರು.

ನವೆಂಬರ್ 14ರ ಶುಕ್ರವಾರ ದಂದು ತಾಲೂಕಿನ ಯರಗೇರಾ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಬೆಂಗಳೂರಿನ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ




ಮತ್ತು ರಾಯಚೂರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ರಾಯಚೂರು ವಿಭಾಗದ ಮಾನವ ಹಕ್ಕುಗಳ ಮತ್ತು ಭ್ರಷ್ಟಚಾರ ವಿರೋಧಿ ಸಂಸ್ಥೆ ದೆಹಲಿ ಮತ್ತು ಹೆಚ್.ಆರ್.ಎ.ಸಿ.ಎಫ್ ಮತ್ತು ವಾಲ್ಮೀಕಿ ವಿಶ್ವವಿದ್ಯಾನಿಲಯದ ಲೀಗಲ್ ಅವೇರ್‌ನೆಸ್ ಕಮೀಟಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೂಲಭೂತ ಹಕ್ಕುಗಳಿಗಿಂತ ಕರ್ತವ್ಯಗಳ ಮಾಹಿತಿಯ ಅರಿವು ಮೂಡಿಸುವುದು ಮುಖ್ಯ. ವಾಹನ ಅಪಘಾತಗಳು, ಲೈಂಗಿಕ ದೌರ್ಜನ್ಯ, ಡ್ರಗ್ಸ್ ಮಾರಾಟ, ವೃದ್ದರ ಪೋಷಣೆಯ ನಿರ್ಲಕ್ಷ್ಯ, ಕಾನೂನು ನೆರವು, ಲೋಕ್ ಅದಾಲತ್, ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಪೋಕ್ಸೋ ಕಾಯ್ದೆ ಬಗ್ಗೆ ಅರಿವು ಮೂಡಿಸಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಾಲ್ಮೀಕಿ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ.ಎ.ಚನ್ನಪ್ಪ ಅವರು ಮಾತನಾಡಿ, ನಮಗೆ ಶಿಕ್ಷಣ ದೊರೆಯುತ್ತಿದೆ. ಆದರೆ ನೈತಿಕತೆ ಕಡಿಮೆಯಾಗುತ್ತಿದೆ. ಈ ದಿನಮಾನಗಳಲ್ಲಿ ಕಣ್ಮರೆಯಾಗುತ್ತಿರುವ ಅವಿಭಕ್ತ ಕುಟುಂಬದಲ್ಲಿ ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿಯ ಜೊತೆಗೆ ಮಕ್ಕಳಿಗೆ ಸಾಕಷ್ಟು ವಿಷಯಗಳ ಬಗ್ಗೆ ಅರಿವು ಮೂಡುತ್ತಿತ್ತು. ಇಂದಿನ ಕಾಲಮಾನದಲ್ಲಿ ನೈತಿಕತೆಯ ತಳಹದಿ ಮೇಲೆ ಜೀವಿಸುವ ಸ್ವಯಂ ಪ್ರಭೆ ಮರೆಮಾಚಿ ಯಾವುದೋ ಒಂದು ಮಾಯಾ ಡಿಜಿಟಲ್ ಲೋಕಕ್ಕೆ ತಮ್ಮನ್ನು ತಾವೆ ಅರ್ಪಿಸಿಕೊಂಡು ಗೊತ್ತುಗೊತ್ತಿಲ್ಲದೆ ಅಪರಾಧಗಳಲ್ಲಿ ತೊಡಗಿಸಿಕೊಂಡು ನೈತಿಕತೆಯಿಂದ ನಮ್ಮ ಯುವ ಜನತೆ ದೂರ ಹೋಗುತ್ತಿರುವುದು ವಿಪರ್ಯಾಸ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಅಪರಾಧ ತಡೆ, ಭಷ್ಟಚಾರ ತಡೆ, ಸಾಕಷ್ಟು ಕಾನೂನುಗಳ ಅರಿವು ನೆರವು ಮುಖ್ಯವಾಗಿದ್ದು, ಇಂತಹ ಜಾಗೃತಿ ಕಾರ್ಯಕ್ರಮಗಳು ಅವರಿಗೆ ಉಪಯೊಗ ವಾಗಬಲ್ಲವು ಮತ್ತು ಮುಂಬರುವ ದಿನಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಜಾಗೃತಿ ಕಾರ್ಯಕ್ರಮಗಳು ಹೆಚ್ಚಾಗಿ ಹಮ್ಮಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

## ವೃತ್ತ ಮಟ್ಟದ 94 ನೌಕರರ ಬಡ್ತಿ ಪ್ರಕ್ರಿಯೆ ವಿಳಂಬ ಖಂಡಿಸಿ ಪ್ರತಿಭಟನೆ

ರಿಂದ 94 ನೌಕರರ ಬಡಿಯನು, ಆಗ್ರಹಿಸಲಾಯಿತು. 94 ನೌಕರರ



ಮಲ್ಲಮ್ಮ ನುಡಿ ವಾರ್ತೆ

**ರಾಯಚೂರು:** ನ.–ನಗರದ ವೃತ್ತ ಮಟ್ಟದಲ್ಲಿ 94 ನೌಕರರ ಬಡ್ತಿ ಪ್ರಕ್ರಿಯೆಯನ್ನು ನಡೆಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರು ನಗರದ ಜೇಸ್ಕಾಂ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಲಾಯಿತು.

ರಾಯಚೂರಿನಲ್ಲಿ 94 ನೌಕರರಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆಗೊಂಡು ಆಕ್ಷೇಪಣೆ ಸಲ್ಲಿಸಲು ನೀಡಿರುವ ಅವಧಿ ಮುಕ್ತಾಯಗೊಂಡಿದ್ದರೂ, ಇಲ್ಲಿಯವರೆಗೂ ಅಂತಿಮ ಜೇಷ್ಠತಾ ಪಟ್ಟಿ ಹೊರಡಿಸದೇ ಮತ್ತು ಕೆಳ ಹಂತದ ನೌಕರರ ಬಡ್ತಿಯಲ್ಲಿ ವಿಳಂಬ ಧೋರಣೆ ಮಾಡಿರುವದರಿಂದ ವೃತ್ತ ಮಟ್ಟದಲ್ಲಿ ಬಡ್ತಿ ಪ್ರಕ್ರಿಯೆ ನಡೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆದ್ದ–ರಿಂದ 94 ನೌಕರರ ಬಡ್ತಿಯ ಪ್ರಕ್ರಿಯೆಯನ್ನು 7 ದಿನಗಳೊಳಗಾಗಿ ನಡೆಸುವಂತೆ ಈ ಮೂಲಕ ಕವಿಪ್ರನಿನಿ ನೌಕರ ಸಂಘ ಮತ್ತು ಪ್ರ.ಜಾ, ಪ.ಪಂ ಕಲ್ಯಾಣ ಸಂಸ್ಥೆಯ ಪದಾಧಿಕಾರಿಗಳು ಸೇರಿ ಈ ಹೋರಾಟ ಮಾಡಲು ಎಲ್ಲಾ ಪದಾಧಿಕಾರಿಗಳು ಒಮ್ಮತ ನೀಡಿರುವ ಪತ್ರವನ್ನು ಸಲ್ಲಿಸಲಾಗಿತ್ತು, ಈ ವಿಚಾರಕ್ಕೆ ಸಂಬಂಧಸಿ ಈಗಾಗಲೇ ಉಚ್ಚ ನ್ಯಾಯಾಲಯ ಕಲಬುರಗಿ ಅವರು ಆದೇಶ ನೀಡಿದೆ. ಈ ವಿಷಯಕ್ಕೆ 94 ನೌಕರರ ಬಡ್ತಿಯನ್ನು ನೀಡಲು ಒಪ್ಪಿ ತಮಗೆ ಆದೇಶವನ್ನು ನೀಡಿದ್ದರೂ. ಕೂಡ ಬಡ್ತಿ ಪ್ರಕ್ರಿಯೆ ಮಾಡಿಲ್ಲ ಎಂದು ದೂರಿದರು. ಆದ್ದರಿಂದ ಕಾರ್ಯ ಮತ್ತು ಪಾಲನಾ ರಾಯಚೂರು ವೃತ್ತದಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಬೇಡಿಕೆಗಳನ್ನು ಇಂದಿನಿಂದ 15 ದಿನಗಳೊಳಗಾಗಿ ಬಡ್ತಿ ಪ್ರಕ್ರಿಯೆಯನ್ನು ಅಂತಿಮಗೊಳಿಸಲು ಆಗ್ರಹಿಸಲಾಯಿತು. 94 ನೌಕರರ ಬಡ್ತಿಯನ್ನು ನೀಡಬೇಕು. 12 ಬಿ ಅಡಿಯಲ್ಲಿ ಕಿರಿಯ ಅಭಿಯಂತರರು(ವಿ) ಹುದ್ದೆಗೆ ಬಡ್ತಿ ನೀಡಬೇಕು.

ಟಿ.ಎಲ್.ಎಮ್. ನೌಕರರ ಬಡ್ತಿ ನೀಡಬೇಕು. ಟ್ರೈನ್ ಮೆಕ್ಯಾನಿಕ್ ದರ್ಜೆ–1, ಮತ್ತು 2. ಸ್ಟೇಷನ್ ಮೆಕ್ಯಾನಿಕ್ ದರ್ಜೆ–2, ಮತ್ತು 1, ಲೈನ್ ಮ್ಯಾನ್ ಮತ್ತು ಸಹಾಯಕ ಲೈನ್ ಮ್ಯಾನ್ ಹುದ್ದೆಗಳ ಬಡ್ತಿ ನೀಡಬೇಕು.

ಪವರ್ ಮ್ಯಾನ್, ಕಿರಿಯ ಪವರ್ ಮ್ಯಾನ್ ಹುದ್ದೆಗಳ ಬಡ್ತಿ ನೀಡಬೇಕು. ವೃತ್ತ ಮಟ್ಟದಲ್ಲಿ ಬಾಕಿ ಇರುವ ಹುದ್ದೆಗಳು ಬಡ್ತಿ ಹಾಗೂ ಪ್ರಧಾನ ವ್ಯವಸ್ಥಾಪಕರು ನಿಗಮ ಕಛೇರಿ ಕಲಬುರಗಿಯಲ್ಲಿ ಬಡ್ತಿ ನೀಡಬೇಕಾದ ಹುದ್ದೆಗಳಿಗೆ ಬಡ್ತಿ ನೀಡಬೇಕು ಎಂದು ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಎನ್.ವೆಂಕಟೇಶ ಅನೇಕರು ನೌಕರರ ಇದ್ದರು.

## ಕಳಪೆ ಬೀಜದಿಂದ ರೈತರಿಗೆ ನಷ್ಟ : ನ 19 ರಿಂದ ಮಾನ್ವಿ ಬಂದ್ ಹಾಗೂ ಅನಿರ್ದಿಷ್ಟಾವಧಿ ಹೋರಾಟ




ಮಲ್ಲಮ್ಮ ನುಡಿ ವಾರ್ತೆ

**ಮಾನ್ವಿ:** ತಾಲೂಕಿನ ಅನೇಕ ಹಳ್ಳಿಗಳಲ್ಲಿ ನೀಲಕಂಠೇಶ್ವರ ಸೀಡ್ಸ್ ಕಂಪನಿಯ ಬಿಪಿ–2 ಕಳಪೆ ಬೀಜಗಳ ಪರಿಣಾಮವಾಗಿ ಸಾವಿರಾರು ಎಕರೆ ಭತ್ತದ ಬೆಳೆ ಹಾಳಾಗಿದ್ದು, ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ವಿಷಯದ ಬಗ್ಗೆ ಹಲವು ಬಾರಿ ಆಡಳಿತದ ಗಮನ ಸೆಳೆದಿದ್ದರೂ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದು ವಿಷಾದನೀಯ.

ಕೃಷಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕಂಪನಿಯ ಅನುದಾರಿತೆಯಿಂದ ರೈತರು ವಂಚಿತರಾಗಿದ್ದಾರೆ. ಸರ್ಕಾರದಿಂದ ತಕ್ಷಣದ ಪರಿಹಾರ ಹಾಗೂ ಕಂಪನಿಯ ಲೈಸೆನ್ಸ್ ರದ್ದುಪಡಿಸುವ ಬೇಡಿಕೆಯನ್ನು ರೈತರು ಹಲವು ಬಾರಿ ಮುಂದಿಟ್ಟಿದ್ದಾರೆ. ಆದಾಗ್ಯೂ, ಅಧಿಕಾರಿಗಳು ಮೌನ ವಹಿಸಿರುವುದರಿಂದ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜನಸೇವಾ ಫೌಂಡೇಶನ್, ದಲಿತ ಸೇನೆ, ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ) ಹಾಗೂ ಇತರ ಸಾಮಾಜಿಕ ಸಂಘಟನೆಗಳ ಆಶ್ರಯದಲ್ಲಿ ದಿನಾಂಕ 19–11–2025 ರಂದು ಮಾನ್ವಿ ಬಂದ್ ಹಾಗೂ ಅನಿರ್ದಿಷ್ಟಾವಧಿ ಧರಣಿ ಹೋರಾಟ ಕೈಗೊಳ್ಳಲು ತೀರ್ಮಾನಿಸಲಾಗಿದೆ.

ಹೋರಾಟವು ಮಾನ್ವಿ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾಗಿ ಬಸವ ವೃತ್ತದ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ, ಅಲ್ಲಿಂದ ತಾಲೂಕು ಪಂಚಾಯಿತಿ ಆವರಣದಲ್ಲಿ ನಡೆಯಲಿದೆ. ಹೋರಾಟವು ಸಂಪೂರ್ಣ ಶಾಂತಿಯುತ ರೀತಿಯಲ್ಲಿ ನಡೆಯಲಿದ್ದು, ರೈತರಿಗೆ ನ್ಯಾಯ ಸಿಗುವವರೆಗೆ ಮುಂದುವರಿಯಲಿದೆ.

**ಮುಖ್ಯ ಬೇಡಿಕೆಗಳು:**

1. ಕಳಪೆ ಬೀಜ ಮಾರಾಟ ಮಾಡಿದ ನೀಲಕಂಠೇಶ್ವರ ಸೀಡ್ಸ್ ಕಂಪನಿ ಹಾಗೂ ಸಂಬಂಧಿತ ಮಳಿಗೆ ಮಾಲೀಕರ ವಿರುದ್ಧ ತಕ್ಷಣ ಎಫ್ಐಆರ್ ದಾಖಲಿಸಬೇಕು.
2. ರೈತರಿಗೆ ಉಂಟಾದ ನಷ್ಟಕ್ಕೆ ಪ್ರತಿ ಎಕರೆಗೂ ಕನಿಷ್ಠ -50,000 ಪರಿಹಾರ ನೀಡಬೇಕು.
3. ಕೃಷಿ ಇಲಾಖೆಯ ಹೊಣೆಗಾರ ಅಧಿಕಾರಿಗಳನ್ನು ಅಮಾನತು ಮಾಡಿ ತನಿಖೆ ನಡೆಸಬೇಕು.
4. ವಿಜ್ಞಾನಿಗಳಿಂದ ನಿಜಾಂಶ ವರದಿ ತಕ್ಷಣ ಪ್ರಕಟಿಸಬೇಕು.
5. ಬಿತ್ತನೆ ಅನುಮತಿ ನೀಡಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.

**ನಮ್ಮ ಎಚ್ಚರಿಕೆ:**

ಸರ್ಕಾರ ಹಾಗೂ ಜಿಲ್ಲಾಡಳಿತ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ಹಂತದಲ್ಲಿ ಜಿಲ್ಲಾಮಟ್ಟದ ಉಗ್ರ ಹೋರಾಟ ಮತ್ತು ಕಾನೂನು ಕ್ರಮ ಕೈಗೊಳ್ಳಲಾಗುವುದು

## ಕಂಪ್ಲಿ: ನ.15 ರಂದು ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ: ನ. ಕಂಪ್ಲಿ ಜೆಸ್ಕಾಂ ವ್ಯಾಪ್ತಿಗೆ ಬರುವ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳನ್ನುಬಗೆಹರಿಸಲು ನ.15 ರಂದು ಮಧ್ಯಾಹ್ನ 12 ಗಂಟೆಗೆ ಕಂಪ್ಲಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಕಚೇರಿ ಆವರಣದಲ್ಲಿ ವಿದ್ಯುತ್ ಗ್ರಾಹಕರಕುಂದು-ಕೊರತೆ ಸಭೆ ಆಯೋಜಿಸಲಾಗಿದೆ. ವಿದ್ಯುತ್ ಗ್ರಾಹಕರು ತಮ್ಮ ದೂರುಗಳನ್ನು ಬಗೆಹರಿಸಿಕೊಳ್ಳಬಹುದು ಎಂದುಜೆಸ್ಕಾಂನಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

### ಅಣಕು ಪ್ರದರ್ಶನಕ್ಕೆ ಅಗತ್ಯ ಸಿದ್ಧತೆಗೆ ಎಸಿ ಪಿ.ಪ್ರಮೋದ್ ಸೂಚನೆ

# ನ.14 ರಂದು ಕುಡತಿನಿಯ ಬಿಟಿಪಿಎಸ್ ಕೈಗಾರಿಕೆಯಲ್ಲಿ ಕಟ್ಟಡ ಕುಸಿತದ ಅಣುಕು ಪ್ರದರ್ಶನ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ನ ತಾಲ್ಲೂಕಿನ ಕುಡತಿನಿ ಬಳಿಯ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಬಿಟಿಪಿಎಸ್) ದಲ್ಲಿ ಜಿಲ್ಲಾಡಳಿತದ ಸಹಕಾರದೊಂದಿಗೆ ಕೇಂದ್ರದ ವಿಪತ್ತು ನಿರ್ವಾಹಣಾ ತಂಡದಿಂದ ನ.14 ರಂದು ಬೆಳಿಗ್ಗೆ 11 ಗಂಟೆಗೆ ಅಣಕು ಪ್ರದರ್ಶನ ಮತ್ತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ಹೇಳಿದರು. ನಗರದ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಎನ್‌ಡಿಆರ್‌ಎಫ್ ನೊಂದಿಗೆ ಏರ್ಪಡಿಸಲಾಗುವ ಪ್ರಸ್ತಕ ಸಾಲಿನ ಅಣುಕು ಪ್ರದರ್ಶನ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಣುಕು ಪ್ರದರ್ಶನದಲ್ಲಿ ಸಂಬಂಧಿಸಿದ ಅಧಿಕಾರಿಗಳು ಹಾಜರಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ನೈಸರ್ಗಿಕ ವಿಕೋಪಗಳು, ಕೈಗಾರಿಕಾ ಪ್ರದೇಶ ವ್ಯಾಪ್ತಿಗಳಲ್ಲಿ ಸಂಭವಿಸಬಹುದಾದ ರಾಸಾಯನಿಕ ಸೋರಿಕೆ, ಕಟ್ಟಡ ಕುಸಿತ ವಿಪತ್ತುಗಳನ್ನು ಸಮರ್ಥವಾಗಿ ಎದುರಿಸಲು, ವಿಕೋಪಗಳಿಂದ ಆಗುವಂತಹ ಅನಾಹುತಗಳನ್ನು ತಪ್ಪಿಸಲು, ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ಅಣುಕು ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ ಎಂದರು.

ಕಟ್ಟಡ ಕುಸಿತ ಸಂದರ್ಭದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾದಾಗ ಕೈಗೊಳ್ಳಬಹುದಾದ ಕ್ರಮ, ಎಚ್ಚರಿಕೆ ಗಂಟೆ ನೀಡುವುದು, ಎಲ್ಲರನ್ನು ಸುರಕ್ಷಿತ ಸ್ಥಳಕ್ಕೆ ಬಂದು ಸೇರುವಂತೆ ಆಜ್ಞೆ ನೀಡುವ ಪರಿ, ಸಾರ್ವಜನಿಕರು-ಕಾರ್ಮಿಕರನ್ನು ರಕ್ಷಿಸಲು ಬೇಕಾದ ಸಾಮಾಗ್ರಿ ಕಿಟ್, ಇದಕ್ಕೆ ಬೇಕಾದ ವಿವಿಧ ಇಲಾಖೆಗಳ ಸಹಕಾರ ಸೇರಿದಂತೆ ಹಲವಾರು ಮಾಹಿತಿ ನೀಡಲು ಅಣಕು ಪ್ರದರ್ಶನ ಏರ್ಪಡಿಸಲಾಗುತ್ತಿದ್ದು, ಎಲ್ಲಾ ಅವಶ್ಯಕ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಕಟ್ಟಡ ಕುಸಿತದ ಅಣುಕು ಪ್ರದರ್ಶನ ನಡೆಯುವ ಸಂದರ್ಭದಲ್ಲಿ ಆ ಸ್ಥಳದಲ್ಲಿ ಅವಶ್ಯಕತೆ ಇರುವ ತುರ್ತು ಆಂಬುಲೆನ್ಸ್ ಹಾಗೂ ಆರೋಗ್ಯ ಸೇವೆ ಒದಗಿಸಲು ವೈದ್ಯರು, ಆರೋಗ್ಯ ಸಿಬ್ಬಂದಿ ಒದಗಿಸಲು



ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು. ಅಗ್ನಿ ಶಾಮಕದಳ, ವಾಹನ ದಟ್ಟಣೆ ಮತ್ತು ನಿಯಂತ್ರಣ ಹಾಗೂ ಸೂಕ್ತ ಬಂದೋಬಸ್ತ್ ವ್ಯವಸ್ಥೆಗೆ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದರು.

ವಿಪತ್ತು ಸಂಭವಿಸಿದಾಗ ಅಧಿಕಾರಿಗಳು ಮತ್ತು ಸಾರ್ವಜನಿಕರು ಸ್ಪಂದಿಸಿದರೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ತಂಡವು ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಕೊಳ್ಳಲು ಸಾಧ್ಯ. ಹಾಗಾಗಿ ಅಣಕು ಪ್ರದರ್ಶನದಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದು ಹೇಳಿದರು.

**ನ.15 ರಂದು ಕಾಲೇಜು ಮಟ್ಟದಲ್ಲಿ ಅಣಕು ಪ್ರದರ್ಶನ:**

ಪ್ರಸ್ತುತದಲ್ಲಿ ಸಂಭವಿಸುತ್ತಿರುವ ತತ್‌ಕ್ಷಣದ ಹೃದಯಾಘಾತ, ಆರೋಗ್ಯ ಸಮಸ್ಯೆ ಹಾಗು ಇತರೆ ಕುರಿತಂತೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳಿಂದ ನ.15 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಮುನಿಸಿಪಲ್ ಕಾಲೇಜು ಮತ್ತು ಅಂ-ಚೆಕಚೇರಿಯ ಪಕ್ಕದ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಅಣಕು ಪ್ರದರ್ಶನ ಏರ್ಪಡಿಸಲಾಗಿದೆ. ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿರುವಂತೆ ಕ್ರಮ ವಹಿಸಬೇಕು ಎಂದು ಡಿಡಿಪಿಯು ಉಪನಿರ್ದೇಶಕರಿಗೆ ಸೂಚಿಸಿದರು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿಕುಮಾರ್, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ,

ಕೇಂದ್ರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಇನ್ಸ್‌ಪೆಕ್ಟರ್ ರಾಮ್ ಭಜ್, ಅಧಿಕಾರಿ ಸುಭಾಷ್ ಶಿಂಧೆ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹನುಮನಗೌಡ ಪೊಲೀಸ್

ಪಾಟೀಲ್, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪರಿಣಿತ ಪರಮೇಶ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಂಪ್ಲಿ: ನ.15 ರಂದು ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ನ. ಕಂಪ್ಲಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗ ವ್ಯಾಪ್ತಿಯ ಇಟಗಿ 110/11ಕೆವಿ ಉಪ ಕೇಂದ್ರದಲ್ಲಿ ವಿದ್ಯುತ್ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುದರಿಂದ ನ.15 ರಂದು ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 03 ಗಂಟೆಯವರೆಗೆ ಇಟಗಿ ಉಪ ಕೇಂದ್ರದ ವ್ಯಾಪ್ತಿಗೆ ಬರುವ ಸಣಾಪುರ, ಬೆಳಗೋಡುಹಾಳು, ನಂ.2 ಮುದ್ದಾಪುರ, ಅರಳಹಳ್ಳಿ, ಮಾರೆಮ್ಮ ಕ್ಯಾಂಪ್, ಬಸವೇಶ್ವರ ಕ್ಯಾಂಪ್, ಇಟಗಿ ಗ್ರಾಮಗಳ ನಿರಂತರ ಜ್ಯೋತಿ, ಎಫ್4-ಅರಳಹಳ್ಳಿ, ಎಫ್3-ಎಚ್‌ಟಿ (ಎಲ್‌ಐಎಸ್) ಮಾರ್ಗಗಳು ಸೇರಿದಂತೆ ಇನ್ನಿತರೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನೀರಾವರಿ ವಿದ್ಯುತ್ ಮಾರ್ಗಗಳ ಎಫ್1-ಇಟಗಿ, ಎಫ್2-ತುಂಗಭದ್ರ, ಎಫ್7-ಮಣ್ಣೂರು ಕ್ಯಾಂಪ್, ಎಫ್11-ಮುದ್ದಾಪುರ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಇಟಗಿ ಉಪಕೇಂದ್ರಕ್ಕೆ ಸಂಬಂಧಿಸಿದ ಪಂಪ್‌ಸೆಟ್ (ಐಪಿಸೆಟ್) ಮಾರ್ಗಗಳ ಬೆಳಿಗ್ಗೆ 04 ಗಂಟೆಯಿಂದ 09 ಗಂಟೆಯವರೆಗೆ (5 ಗಂಟೆ) ಹಾಗೂ ಉಳಿದ 2 ಗಂಟೆ ಸಾಯಂಕಾಲ ವಿದ್ಯುತ್ ಸರಬರಾಜು ಮಾಡಲಾಗುವುದು.

ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕಾರ್ಯ ಜೆಸ್ಕಾಂ ಅನುಮತಿ ಇಲ್ಲದೇ ಮಾಡಬಾರದು. ಒಂದು ವೇಳೆ ವಿದ್ಯುತ್ ಅಪಘಾತ ಸಂಭವಿಸಿದ್ದಲ್ಲಿ ಜೆಸ್ಕಾಂ ಕಂಪನಿ ಜವಾಬ್ದಾರಿಯಾಗಿರುವುದಿಲ್ಲ. ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕೆಂದು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನ.16 ರಂದು ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾತೆ**

**ಬಳ್ಳಾರಿ:** ನ.ಬಳ್ಳಾರಿ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110/11ಕೆ.ವಿ ಮೋಕಾ ಉಪ-ಕೇಂದ್ರದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಮತ್ತು ದುರಸ್ತಿ ಕಾರ್ಯ ಕೈಗೊಳ್ಳುತ್ತಿರುವುದರಿಂದ ನ.16 ರಂದು ಬೆಳಿಗ್ಗೆ 09 ರಿಂದ ಮಧ್ಯಾಹ್ನ 02 ಗಂಟೆಯವರೆಗೆ 110/11ಕೆ.ವಿ ಮೋಕಾ ವಿದ್ಯುತ್ ಉಪ-ಕೇಂದ್ರ ಮತ್ತು 33/11ಕೆ.ವಿ ಯರ್ರಗುಡಿ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11ಕೆ.ವಿ ಮಾರ್ಗಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಎಫ್-01 ಬಿ.ಡಿ.ಹಳ್ಳಿ ಐಪಿ ಮಾರ್ಗದ ಮೋಕಾ ಬಿ.ಡಿ.ಹಳ್ಳಿ ಕೃಷಿ ಪ್ರದೇಶಗಳು. ಎಫ್-02 ಮಸೀದಿಪುರ ಐಪಿ ಮಾರ್ಗದ ಗೋಟೂರು, ಕೆ.ಕೆ. ಹಾಳ್, ಮಸೀದಿಪುರ, ವಣೆನೂರು, ಗುಡುದೂರು ಕೃಷಿ ಪ್ರದೇಶಗಳು. ಎಫ್-04 ಮೋಕಾ/ಶಿವಪುರ ಐಪಿ ಮಾರ್ಗದ ಶಿವಪುರ, ಅಶೋಕನಗರ ಕ್ಯಾಂಪ್, ಕಪ್ಪಗಲ್ಲು, ಸಿರಿವಾರ, ಸಂಗನಕಲ್ಲು, ಚಾಗನೂರು ಕೃಷಿ ಪ್ರದೇಶಗಳು. ಎಫ್-05 ವಾಟರ್ ವರ್ಕ್ಸ್ ಮಾರ್ಗದ ಶಿವಪುರ ವಾಟರ್ ವರ್ಕ್ಸ್. ಎಫ್-12 ಬಸರಕೋಡು ಎನ್.ಜೆ.ವೈ ಮಾರ್ಗದ ಗೋಟೂರು, ಕೆ.ಕೆ.ಹಾಳ್, ಮಸೀದಿಪುರ, ವಣೆನೂರು, ಕರ್ಚೇಡು, ಬಸರಕೋಡು, ಹೀರೆಹಡ್ಲಿಗಿ ಗ್ರಾಮಗಳು. ಎಫ್-13 ಬಸರಕೋಡು ಐಪಿ ಮಾರ್ಗದ ಮೋಕಾ, ಕರ್ಚೇಡು, ಬಸರಕೋಡು, ಹೀರೆಹಡ್ಲಿಗಿ ಕೃಷಿ ಪ್ರದೇಶಗಳು. ಎಫ್-14 ಕಪ್ಪಗಲ್ಲು ಮತ್ತು ಸೋಲಾರ್ ಮಾರ್ಗದ ಶಿವಪುರ, ಅಶೋಕ ನಗರ ಕ್ಯಾಂಪ್, ಕಪ್ಪಗಲ್ಲು, ಸಿರಿವಾರ ಗ್ರಾಮಗಳು. ಎಫ್-15 ಮೋಕಾ ಮತ್ತು ಸೋಲಾರ್ ಮಾರ್ಗದ ಮೋಕಾ ಮತ್ತು ಬಿ.ಡಿ.ಹಳ್ಳಿ ಗ್ರಾಮಗಳು. ಎಫ್-01 ಡಿ.ಎನ್. ಹಳ್ಳಿ ಐಪಿ ಮಾರ್ಗದ ಡಿಎನ್.ಹಳ್ಳಿ, ಜಿ.ಎನ್.ಹಳ್ಳಿ, ತಂಬ್ರಳ್ಳಿ, ಬ್ಯಾಳಚಿಂತೆ ಕೃಷಿ ಪ್ರದೇಶಗಳು. ಎಫ್-02 ಜಿ.ಎನ್ ಹಳ್ಳಿ ಐಪಿ ಮಾರ್ಗದ ಜಿ.ಎನ್. ಹಳ್ಳಿ, ತಂಬ್ರಳ್ಳಿ, ಬ್ಯಾಳಚಿಂತೆ ಕೃಷಿ ಪ್ರದೇಶಗಳು. ಎಫ್-03 ಹಳೆಯರ್ರಗುಡಿ ಐಪಿ ಮಾರ್ಗದ ಹಳೆ ಯರ್ರಗುಡಿ, ಹೊಸ ಯರ್ರಗುಡಿ, ಸಿಂಧುವಾಳ, ಬೆಣಕಲ್ಲು ಕೃಷಿ ಪ್ರದೇಶಗಳು. ಎಫ್-04 ವೇದಾವತಿ ಐಪಿ ಮಾರ್ಗದ ಡಿಎನ್ ಹಳ್ಳಿ, ಮೋಕಾ ಕೃಷಿ ಪ್ರದೇಶಗಳು. ಎಫ್-05 ಸಿಂಧುವಾಳ ಮತ್ತು ಸೋಲಾರ್ ಮಾರ್ಗದ ಹಳೆ ಯರ್ರಗುಡಿ, ಹೊಸ ಯರ್ರಗುಡಿ, ಸಿಂಧುವಾಳ, ಬೆಣಕಲ್ಲು, ಗೋನಾಳ್, ಜಾಲಿಹಾಳ್, ಬೊಮ್ಮನಹಾಳ್ ಗ್ರಾಮಗಳು. ಎಫ್-06 ಜಾಲಿಹಾಳ್ ಐಪಿ ಮಾರ್ಗದ ಎಮ್.ಗೋನಾಳ್, ಜಾಲಿಹಾಳ್, ಬೊಮ್ಮನಹಾಳ್ ಕೃಷಿ ಪ್ರದೇಶಗಳು. 33ಕೆ.ವಿ ಮಾರ್ಗದ 33ಕೆ.ವಿ ಎನ್.ಡಿ.ಪಿ.ಎಲ್ ನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

**ಸೂಚನೆ:** ನ.16 ರಂದು ಈ ಉಪಕೇಂದ್ರಗಳಿಂದ ಎಲ್ಲಾ ಕೃಷಿ ಮಾರ್ಗಗಳಿಗೆ ಬೆಳಿಗ್ಗೆ 04 ರಿಂದ 09 ರ ವರೆಗೆ ವಿದ್ಯುತ್ ಸರಬರಾಜು ಮಾಡಲಾಗುವುದು. ಬಾಕಿ ಉಳಿದ ನಿರ್ವಹಣೆ ನಂತರ ವಿದ್ಯುತ್ ಸರಬರಾಜು ಮಾಡಲಾಗುವುದು.

ಹಾಗಾಗಿ ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.15 ರಿಂದ 17 ರವರೆಗೆ ರಾಜ್ಯ ಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾವಳಿ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ: ನ** ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಬಳ್ಳಾರಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ (14 ಮತ್ತು 17 ವರ್ಷದೊಳಗಿನ ಬಾಲಕ/ಬಾಲಕಿಯರ) 2025-26 ನೇ ಸಾಲಿನ ರಾಜ್ಯ ಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾವಳಿಗಳನ್ನು ನವೆಂಬರ್ 15 ರಿಂದ 17 ರ ವರೆಗೆ ನಗರದ ಕಂಟೋನ್ ಮೆಂಟ್ ಪ್ರದೇಶದ ನಂದಿ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದೆ.

ನ.15 ರಂದು ಬೆಳಿಗ್ಗೆ 10.30 ಗಂಟೆಗೆ ನಂದಿ ಪ್ರೌಢಶಾಲೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ಜರುಗಲಿದೆ ಎಂದು ಜಿಲ್ಲಾ ದೈಹಿಕ ಪರಿವೀಕ್ಷಕರು ತಿಳಿಸಿದ್ದಾರೆ.

# ಹೊಸದಾಗಿ ನ್ಯಾಯಬೆಲೆ ಅಂಗಡಿ ಆರಂಭಿಸಲು ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:ನ.** ಬಳ್ಳಾರಿ ನಗರದ ಗುಗ್ಗರಹಟ್ಟಿ ಪ್ರದೇಶದ ರೈಲ್ವೆ ಗೇಟ್ ಬಳಿಯ ಆಂಜನೇಯ ದೇವಸ್ಥಾನದ ಹತ್ತಿರ ಪಡಿತರ ಚೀಟಿದಾರರ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಪರಿಣಾಮಕಾರಿಗೊಳಿಸುವ ಹಿತದೃಷ್ಟಿಯಿಂದ ಈ ಪ್ರದೇಶದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಉದ್ದೇಶಿಸಲಾಗಿದ್ದು, ನಿಗಧಿತ ನಮೂನೆ-ಎ ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ನಗರದ ನೂತನ ಜಿಲ್ಲಾಡಳಿತ ಭವನದ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದಾಗಿದ್ದು, ಭರ್ತಿ ಮಾಡಿ ಅರ್ಜಿಗಳನ್ನು ಅಗತ್ಯ ದೃಢೀಕೃತ ದಾಖಲೆಗಳೊಂದಿಗೆ ಪ್ರಕಟಣೆ ಹೊರಡಿಸಿದ ದಿನದಿಂದ 30 ದಿನಗಳೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ನಿಗಧಿತ ಅವಧಿಯ ನಂತರ ಸಲ್ಲಿಕೆಯಾಗುವ ಅಥವಾ ಬೇರೆ ಕಚೇರಿಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡುವಾಗ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2018ರ ಆದ್ಯತೆಗಳನ್ನು ಪರಿಗಣಿಸಲಾಗುವುದು.

*ವಿವರ:*

ಬಳ್ಳಾರಿ ನಗರದ ಗುಗ್ಗರಹಟ್ಟಿ ಪಟ್ಟಣ ಪ್ರದೇಶದ ಆಂಜನೇಯ ಗುಡಿ ಹತ್ತಿರದ ವೆಂಕಟಮ್ಮ ಕಾಲೋನಿ ಸೇರ್ಪಡೆಗೊಳ್ಳುವ ಪ್ರದೇಶವಾಗಿದ್ದು, ಒಟ್ಟು 2693 ಪಡಿತರ ಚೀಟಿಗಳಲ್ಲಿ ಅಂದಾಜು 850 ಪಡಿತರ ಚೀಟಿ ನಿಯೋಜನೆ, 1843 ನಿಯೋಜನೆ ನಂತರ ಉಳಿಯುವ ಪಡಿತರ ಚೀಟಿಗಳು.

ರಾಜ್ಯ ಸರ್ಕಾರಿ ಸ್ವಾಮ್ಯದ ನಿಗಮ, ಸಂಸ್ಥೆ, ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದು. ಅದರಂತೆ ಸಹಕಾರ ಸಂಘಗಳಾದ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘ (ನಿ), ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅಥವಾ ವಿ.ಎಸ್.ಎಸ್.ಎಂ.ಎಸ್., ತೋಟಗಾರಿಕೆ ಉತ್ಪನ್ನಗಳ ಸಹಕಾರ ಸಂಘದ ಮಾರಾಟ ಮಂಡಳಿ ನಿಯಮಿತ, ನೋಂದಾಯಿತ ಸಹಕಾರ ಸಂಘಗಳು, ನೋಂದಾಯಿತ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು, ದೊಡ್ಡ ಪ್ರಮಾಣದ ಆದಿವಾಸಿಗಳ ವಿವಿಧೋದ್ದೇಶ ಸಹಕಾರ ಸಂಘ, ನೋಂದಾಯಿತ ನೇಕಾರರ ಸಹಕಾರ ಸಂಘ, ನೋಂದಾಯಿತ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳು, ನೋಂದಾಯಿತ ವಿವಿಧೋದ್ದೇಶ ಸಹಕಾರ ಸಂಘಗಳು. ಅಂಗವಿಕಲರ ಕಲ್ಯಾಣ ಸಹಕಾರ ಸಂಘಗಳು, ಬ್ಯಾಂಕಿನಿಂದ ನಡೆಸಲ್ಪಡುವ ಸಹಕಾರ ಸಂಘಗಳು ಅಥವಾ ಸಹಕಾರ ಬ್ಯಾಂಕ್ ಮತ್ತು ವಿಕಲಚೇತನರು (ಸರ್ಕಾರ ನಿಯಮಾನುಸಾರ), ತೃತೀಯ ಲಿಂಗಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಸಹಕಾರ ಸಂಘಗಳು ಕನಿಷ್ಠ ಮೂರು ವರ್ಷದ ಹಿಂದೆ ನೋಂದಾಯಿಸಿರಬೇಕು ಮತ್ತು ಮೂರು

# ಪರಿಸರ ಸಂರಕ್ಷಣೆಯ ಜವಾಬ್ದಾರಿ ಅರಿಯೋಣ: ಡಾ.ಸಿದ್ದೇಶ್ವರ ಬಾಬು

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ: ನ.** ನಮ್ಮ ಸುತ್ತ-ಮುತ್ತಲಿನ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕಾಳಜಿ ವಹಿಸುವ ಮೂಲಕ ಅದರ ಜವಾಬ್ದಾರಿ ಸಹ ಅರಿತುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಿಲ್ಲಾ ಪರಿಸರ ಅಧಿಕಾರಿ ಡಾ.ಸಿದ್ದೇಶ್ವರ ಬಾಬು ಅವರು ಹೇಳಿದರು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ (ಆರ್‌ಎಎಂಪಿ) ಯೋಜನೆಯಡಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪರಿಸರ ಮತ್ತು ಸಾಮಾಜಿಕ ನಿರ್ವಹಣೆ (ಇಎಸ್‌ಎಂ) ಯೋಜನೆಯ ಒಂದು ದಿನದ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಪರಿಸರ ಸಂರಕ್ಷಣೆಯ ಮೇಲಿನ ಜವಾಬ್ದಾರಿಗಳನ್ನು ಯೋಜನೆಗಳ ಮೂಲಕ ರೂಪಿಸಿ ಅನುಷ್ಠಾನಗೊಳಿಸಬೇಕು



ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿನಿರ್ದೇಶಕ ಸೋಮಶೇಖರ್.ಬಿ., ಉದ್ಯೋಗ ಮತ್ತು ಜಿಲ್ಲಾ ಕೌಶಲ್ಯ ಅಧಿಕಾರಿ ಹಟ್ಟೆಪ್ಪ, ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕ ಮಹಾಂತೇಶ ಕಂಚಿಮಠ, ಜೆಎಸ್‌ಡಬ್ಲ್ಯೂ ಸ್ಟೀಲ್‌ನ ಪರಿಸರ ಅಧಿಕಾರಿ ಡಾ.ಜಯಪ್ರಕಾಶ್, ಶ್ರೀಮೇಧಾ ಶಿಕ್ಷಣ ಸಮೂಹ ಸಂಸ್ಥೆಯ ಪ್ರಾಂಶುಪಾಲ ಡಾ.ರಾಮ್ ಕಿರಣ್.ಕೆ., ಬಿಹೆಚ್‌ಕ್ಯೂ ಪ್ರಾಜೆಕ್ಟ್ಸ್ ಉಪಾಧ್ಯಕ್ಷ ಉಮಾ ಶಂಕರ್, ಜೆಎಸ್‌ಡಬ್ಲ್ಯೂ ಸ್ಟೀಲ್ ತರಬೇತಿ ಅಧಿಕಾರಿ ಸುದರ್ಶನ ಹೆಚ್.ಆರ್., ಸಿಡಾಕ್ ನ ವಿನೋದ್ ಕುಮಾರ್, ಆರ್‌ಸೆಟ್‌ಇ ತರಬೇತಿ ಅಧಿಕಾರಿ ಜಡೆಪ್ಪ ಸೇರಿದಂತೆ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ಸರ್ಕಾರಿ-ಖಾಸಗಿ ಸಂಸ್ಥೆಗಳಲ್ಲಿ ಬೀದಿ ನಾಯಿಗಳು ಕಾಟ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:** ನ ಕಂಪ್ಲಿ ಪುರಸಭೆ ಮತ್ತು ಕುಡುತಿನಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುವ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳ ಮುಖ್ಯಸ್ಥರು ಸರ್ವೋಚ್ಚ ನ್ಯಾಯಾಲಯ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳು ವಾಸವಿದ್ದಲ್ಲಿ, ಪರಿಶೀಲಿಸಿ ಬೀದಿ ನಾಯಿಗಳ ಸಂಖ್ಯೆಯ ಬಗ್ಗೆ ಮುಖ್ಯಾಧಿಕಾರಿಗಳಿಗೆ ಮಾಹಿತಿ ನೀಡಬೇಕೆಂದು ಕಂಪ್ಲಿ ಪುರಸಭೆ ಮತ್ತು ಕುಡುತಿನಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

**ಸೂಚನೆ:**

ಸರ್ಕಾರಿ ಮತ್ತು ಖಾಸಗಿ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮ ವಹಿಸಬೇಕು. ನಗರ ಸ್ಥಳೀಯ ಸಂಸ್ಥೆಗಳಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗೂ ಅವುಗಳ ಪ್ರವೇಶ ನಿರ್ಬಂಧಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಬೇಕು. ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅದನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದು.

ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುರೇಕುಪ್ಪ ಪುರಸಭೆ: ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ನ.ಕುರೇಕುಪ್ಪ ಪುರಸಭೆ ವತಿಯಿಂದ 2019-20/21ನೇ ಸಾಲಿನ ಎಸ್‌ಸಿಎಸ್‌ಪಿ ಯೋಜನೆಯಡಿ ಬಾಕಿ ಉಳಿದ ಮೊತ್ತಕ್ಕೆ ಅರ್ಹ ಫಲಾನುಭವಿಗಳಿಂದ ಪಕ್ಕಾ ಮನೆ ನಿರ್ಮಾಣಕ್ಕಾಗಿ, ಶೌಚಾಲಯ ನಿರ್ಮಾಣಕ್ಕಾಗಿ ಸಹಾಯಧನ ಪಡೆಯಲು ಮತ್ತು ಪುರಸಭೆಯ ಪೌರಕಾರ್ಮಿಕರಿಗೆ ನಿವೇಶನ ಖರೀದಿಗಾಗಿ ಸಹಾಯಧನ ನೀಡಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

**ಬೇಕಾದ ದಾಖಲೆ:** ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಇತ್ತೀಚಿನ ಭಾವಚಿತ್ರ, ಮನೆ ತೆರಿಗೆ ರಶೀದಿ, ನಮೂನೆ-03, ನಿವೇಶನ ಖರೀದಿ ಸಂಬಂಧಿಸಿದಂತೆ ಅಗ್ರಿಮೆಂಟ್ ಪತ್ರ ಹಾಗೂ ಇತರೆ ದಾಖಲೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ನ.20 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಕುರೇಕುಪ್ಪ ಪುರಸಭೆ ಕಚೇರಿ ಅಥವಾ ದೂ. 08395-295601 ಗೆ ಸಂಪರ್ಕಿಸಬಹುದು ಎಂದು ಕುರೇಕುಪ್ಪ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾಲ್ಕಿಗೆ ಮೇಲ್ದರ್ಜೆ ಬಲ-ಭಾಲ್ಕಿಯ ಉಭಯ ಪೂಜ್ಯರು ಸಂತಸ

**ಮಲ್ಲಮ್ಮ ನುಡಿ ವಾರ್ತೆ**

**ಭಾಲ್ಕಿ:** ಗಡಿ ಜಿಲ್ಲೆ ಬೀದರ್‌ನ ಕಮಲನಗರ ಮತ್ತು ಭಾಲ್ಕಿ ಸ್ಥಳೀಯ ಸಂಸ್ಥೆಗಳಿಗೆ ಸಚಿವ ಸಂಪುಟ ಸಭೆಯಲ್ಲಿ ಸರಕಾರ ಮೇಲ್ದರ್ಜೆ ಬಲ ತುಂಬಿರುವುದು ಸಂತಸ ತರಿಸಿದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮತ್ತು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದ್ದಾರೆ.



ಕಮಲನಗರ ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ಜನ್ಮಭೂಮಿ ಆಗಿದ್ದು, ಸಮಗ್ರ ಅಭಿವೃದ್ಧಿ ಕನಸು ಕಂಡಿದ್ದರು. ಇದೀಗ ಇಲ್ಲಿಯ ಗ್ರಾಮ ಪಂಚಾಯತಿಗೆ ಬಡ್ತಿ ನೀಡಿ ಪಟ್ಟಣ ಪಂಚಾಯತಿಯಾಗಿ ಪರಿವರ್ತನೆ ಆಗುತ್ತಿರುವುದು ಹರ್ಷ ತರಿಸಿದೆ. ಜತೆಗೆ ಭಾಲ್ಕಿ ಪಟ್ಟಣ ಪಟ್ಟದ್ದೇವರ ಕಾಯಕ ಭೂಮಿ ಆಗಿದ್ದು ಇಲ್ಲಿಯ ಪುರಸಭೆಯನ್ನು ನಗರಸಭೆ ಸೇರಿ ಕಮಲನಗರ, ಭಾಲ್ಕಿಗೆ ಏಕಕಾಲಕ್ಕೆ ಬಡ್ತಿ ನೀಡುವ ಮೂಲಕ ಸರಕಾರ ಮಹತ್ವದ ನಿರ್ಣಯ ಕೈಗೊಂಡಿದೆ. ಜಿಲ್ಲೆಯ ಪ್ರಗತಿಯಲ್ಲಿ ಖಂಡ್ರೆ ಪರಿವಾರದ ಕೊಡುಗೆ ದೊಡ್ಡದಿದೆ. ಜಿಲ್ಲಾ ಉಸ್ತುವಾರಿ ಸಚಿವರಾಗಿ ಈಶ್ವರ ಖಂಡ್ರೆ ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರ ಪರಿಶ್ರಮದಿಂದ ಕಮನಗರ, ಭಾಲ್ಕಿ ಸ್ಥಳೀಯ ಸಂಸ್ಥೆಗಳು ಬಡ್ತಿ ಹೊಂದುತ್ತಿವೆ. ಈ ಮಹತ್ವದ ನಿರ್ಣಯದಲ್ಲಿ ಪೌರಾಡಳಿತ ಸಚಿವ ರಹೀಂಖಾನ್ ಮತ್ತು ಔರಾದ್ ಶಾಸಕ ಪ್ರಭು ಚವ್ಹಾಣ ಅವರ ಕೊಡುಗೆ ದೊಡ್ಡದಿದೆ. ಹೀಗೆ ಎಲ್ಲ ಜನಪ್ರತಿನಿಧಿಗಳು ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಲಿ ಎಂದು ಪ್ರಕಟಣೆ

# ನ.18 ರಂದು ಕೃಷಿ ಉಪಕರಣಗಳ ಬಹಿರಂಗ ಹರಾಜು

**ಮಲ್ಲಮ್ಮ ನುಡಿ ವಾರ್ತೆ**

**ಬಳ್ಳಾರಿ:** ನ. ಜಿಲ್ಲೆಯ ಹಗರಿಯ ಕೃಷಿ ಸಂಶೋಧನಾ ಕೇಂದ್ರದಲ್ಲಿರುವ ಅನುಪಯುಕ್ತ ವಸ್ತುಗಳಾದ ಕೃಷಿ ಉಪಕರಣಗಳನ್ನು ನ.18 ರಂದು ಬೆಳಿಗ್ಗೆ 10 ಗಂ-ಟೆಗೆ ಸಂಶೋಧನಾ ಕೇಂದ್ರದ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು ಎಂದು ಕೃಷಿ ಸಂಶೋಧನಾ ಕೇಂದ್ರದ ಹಿರಿಯ ಕ್ಷೇತ್ರ ಅಧೀಕ್ಷಕ ಅವರು ತಿಳಿಸಿದ್ದಾರೆ.

ಆಸಕ್ತಿವುಳ್ಳವರು ಅನುಪಯುಕ್ತ ವಸ್ತುಗಳ ಬಗ್ಗೆ ಕಚೇರಿಯ ಕಾರ್ಯನಿರ್ವಹಿಸುವ ಯಾವುದೇ ದಿನಗಳಲ್ಲಿ (ಶನಿವಾರ ಮತ್ತು ಭಾನುವಾರ ಹೊರತು ಪಡಿಸಿ) ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯೊಳಗೆ ಖುದ್ದಾಗಿ ಬಂದು ಪರಿಶೀಲಿಸಿಕೊಳ್ಳಬಹುದು.

*ಷರತ್ತು:*

ಅನುಪಯುಕ್ತ ವಸ್ತುಗಳನ್ನು ಹರಾಜಿನ ಕೊನೆಯ ಸಮಯದವರೆಗೂ ಕಚೇರಿ ವೇಳೆಯಲ್ಲಿ ಪರಿಶೀಲಿಸಿಕೊಳ್ಳಬಹುದು. ಅನುಪಯುಕ್ತ ವಸ್ತುಗಳನ್ನು ನೋಡಲು ಸಾಕಷ್ಟು ಕಾಲಾವಧಿ ನೋಡಿರುವುದರಿಂದ ಹರಾಜಿನ ಬಗ್ಗೆ ಹರಾಜು ಮುಗಿದ ಬಳಿಕ ಬರುವ ಯಾವುದೇ ಆಕ್ಷೇಪಣೆಗಳನ್ನು ಅಂಗೀಕರಿಸುವುದಿಲ್ಲ.

ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ಅನುಪಯುಕ್ತ ವಸ್ತುಗಳಿಗೆ ಠೇವಣಿ ಹಣ 10 ಸಾವಿರ ರೂಗಳು ಪ್ರತ್ಯೇಕವಾಗಿ ಕಚೇರಿಗೆ ಸಂದಾಯ ಮಾಡಿ ಹರಾಜಿನಲ್ಲಿ ಭಾಗವಹಿಸಬೇಕು. ಹರಾಜು ಮುಗಿದ ಬಳಿಕ ಹಣವನ್ನು ಹಿಂತಿರುಗಿಸಲಾಗುವುದು. ಹೆಚ್ಚಿನ ಬಿಡ್ ಮಾಡಿದ ಸವಾಲುದಾರರು ಸವಾಲು ನಿಂತಲ್ಲಿ ಕೂಡಲೇ ಪೂರ್ಣ ಹಣವನ್ನು ಸಂದಾಯ ಮಾಡಿ ಅಧೀಕೃತ ಸ್ವೀಕೃತಿ ಪತ್ರ ಪಡೆಯ ತಕ್ಕದ್ದು, ಇಲ್ಲದಿದ್ದಲ್ಲಿ ಅವರು ಕಟ್ಟಿರುವ ಠೇವಣಿ ಹಣವನ್ನು ಹಿಂತಿರುಗಿಸಲಾಗುವುದಿಲ್ಲ.

ಹಣವನ್ನು ಹಣಕಾಸು ನಿಯಂತ್ರಾಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಇವರಿಗೆ ಸಂದಾಯ ಮಾಡಲಾಗುವುದು. ಹರಾಜಿನಲ್ಲಿ ಅನುಪಯುಕ್ತ ವಸ್ತುಗಳು ಒಂದು ವೇಳೆ ಸರಿಯಾದ ಬೆಲೆಗೆ ಹೋಗದಿದ್ದಲ್ಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹರಾಜನ್ನು ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ.

ಯಶಸ್ವಿ ಬಿಡ್‌ದಾರನು ಪೂರ್ಣ ಹಣ ಸಂದಾಯ ಮಾಡಿ ಸ್ವೀಕೃತ ಪತ್ರ ಪಡೆದ ಸಮಯದಿಂದಲೇ ಅನುಪಯುಕ್ತ ವಸ್ತುಗಳ ಮೇಲೆ ಹಕ್ಕುವುಳ್ಳವನಾಗಿ ಅದರ ರಕ್ಷಣೆ, ನಿರ್ವಹಣೆ, ಸಾಗಾಣಿಕೆ ಇತ್ಯಾದಿ ಎಲ್ಲಾ ಸ್ವಯಂ ಆಗಿ ನೋಡಿಕೊಳ್ಳತಕ್ಕದ್ದು. ಹರಾಜು ಪ್ರಾರಂಭವಾದ ನಂತರ ಬಂದವರಿಗೆ ಹರಾಜಿನಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದಿಲ್ಲ. ಮೇಲೆ ತಿಳಿಸಿದ ಅನುಪಯುಕ್ತ ವಸ್ತುಗಳನ್ನು ನ.18 ರೊಳಗೆ ಪಡೆಯತಕ್ಕದ್ದು, ನಂತರ ಅವಕಾಶವಿರುವುದಿಲ್ಲ.

ಯಶಸ್ವಿ ಬಿಡ್‌ದಾರನ ಠೇವಣಿ ಹಣವನ್ನು ನ.18 ರಂದು ಹಿಂತಿರುಗಿಸಲಾಗುವುದು. ಯಶಸ್ವಿ ಬಿಡ್‌ದಾರರು ಬಿಡ್ ಮಾಡಿದ ಅನುಪಯುಕ್ತ ವಸ್ತುಗಳನ್ನು ಹೊರತುಪಡಿಸಿ ಕೇಂದ್ರದ ಬೇರೆ ವಸ್ತುಗಳಿಗೆ ಮತ್ತು ಆಸ್ತಿ-ಪಾಸ್ತಿಗಳಿಗೆ ಹಾನಿ ಮಾಡಬಾರದು. ಯಾವುದೇ ತರಹದ ಹಾನಿಯಾದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ನಿಯಮಾವಳಿ ಮತ್ತು ನಿರ್ಣಯದ ಪ್ರಕಾರ ಹಾನಿಯ ಖರ್ಚನ್ನು ತಕ್ಷಣ ಭರಿಸಬೇಕು.

ಬಿಡ್ ಮಾಡಿದ ಅನುಪಯುಕ್ತ ವಸ್ತುಗಳನ್ನು ಕೇವಲ ಕಚೇರಿ ಸಮಯದಲ್ಲಿ ಅಂದರೆ ಬೆಳಿಗ್ಗೆ 09 ರಿಂದ ಸಂಜೆ 05 ಗಂಟೆಯವರೆಗೆ ಮಾತ್ರ ಕೇಂದ್ರದ ಹೊರಗೆ ಸಾಗಿಸಬೇಕು. ಬಿಡ್ ಮಾಡಿದ ಅನುಪಯುಕ್ತ ವಸ್ತುಗಳನ್ನು ಕೇಂದ್ರದ ಹೊರಗೆ ಸಾಗಿಸಲು ಅವಶ್ಯಕವಾದ ಪರವಾನಿಗೆ ಪತ್ರಗಳನ್ನು ಸಂಭಂದಪಟ್ಟ ಅಧಿಕಾರಿಗಳಿಂದ/ಸಂಸ್ಥೆಗಳಿಂದ ಬಿಡ್‌ದಾರರೇ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೃಕ್ಷಮಾತೆ ಶತಾಯಷಿ ತಿಮ್ಮಕ್ಕ ನಿಧನ : ಭಾಲ್ಕಿ ಪೂಜ್ಯರು ಸಂತಾಪ

**ಮಲ್ಲಮ್ಮ ನುಡಿ ವಾರ್ತೆ**

**ಭಾಲ್ಕಿ:** ವೃಕ್ಷಮಾತೆ ಶತಾಯುಷಿ ಸಾಲುಮರದ ತಿಮ್ಮಕ್ಕ (114) ಅವರ ನಿಧನಕ್ಕೆ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಸಂತಾಪ ಸೂಚಿಸಿದ್ದಾರೆ.

ತಿಮ್ಮಕ್ಕಗೆ ಮಕ್ಕಳಿರಲಿಲ್ಲ. ಆ ಕೊರಗು ಮರೆಯಲು ತಿಮ್ಮಕ್ಕ ಅವರು ರಸ್ತೆ ಬದಿ ಗಿಡಗಳನ್ನು ನೆಟ್ಟರು. ಅವುಗಳನ್ನೇ ತಮ್ಮ ಮಕ್ಕಳೆಂದು ನಿತ್ಯ ನೀರು ಹಾಕಿ, ದನಕರುಗಳು ತಿನ್ನದಂತೆ ನೋಡಿಕೊಂಡು ಪೋಷಿಸಿದರು.



ಗಿಡಗಳನ್ನು ಮಕ್ಕಳಂತೆ ಕಂಡು ಪೋಷಿಸಿ ಬೆಳೆಸಿದ್ದ ತಿಮ್ಮಕ್ಕ ಅವರ ಸಾಧನೆಗೆ ಭಾರತ ಸರಕಾರದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಹಲವು ಪ್ರಶಸ್ತಿಗಳು, ಪುರಸ್ಕಾರಗಳು ಹಾಗೂ ಬಿರುದುಗಳು ಸಂದಿವೆ. ಭಾಲ್ಕಿ ಪಟ್ಟಣದಲ್ಲಿ 2010ರಲ್ಲಿ ನಡೆದ ವಚನ ಜಾತ್ರೆ ಮತ್ತು ಪಟ್ಟಾಧಿಕಾರ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಸಾಲುಮರದ ತಿಮ್ಮಕ್ಕ ಭಾಗವಹಿಸಿ ಗಿಡಮರಳನ್ನು ಪೋಷಿಸುವಂತೆ ಪ್ರೇರಣೆ ನೀಡಿದ್ದರು.

ತಿಮ್ಮಕ್ಕ ತೋರಿರುವ ಪರಿಸರ ಪ್ರೀತಿ ನಮ್ಮೆಲ್ಲರಿಗೂ ದಾರಿದೀಪವಾಗಲಿದೆ. ತಿಮ್ಮಕ್ಕ ಅವರ ಪರಿವಾರದ

ಸದಸ್ಯರು, ಹಿತೈಷಿಗಳಿಗೆ ತಿಮ್ಮಕ್ಕ ಅವರ ನಿಧನದ ದುಖ ತಡೆದು ಕೊಳ್ಳುವ ಶಕ್ತಿ ವಿಶ್ವಗುರು ಬಸವಣ್ಣನವರು ಕಲ್ಪಿಸಲಿ ಎಂದು ಪ್ರಾರ್ಥಿಸಿದ್ದಾರೆ.

# ಕಲಾದಗಿಯಲ್ಲಿ ಸಹಕಾರಿ ಸಪ್ತಾಹ



**ಮಲ್ಲಮ್ಮ ನುಡಿ ವಾರ್ತೆ**

**ಬಾಗಲಕೋಟೆ:ನ** ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ತಾಲೂಕಿನ ಕಲಾದಗಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಸಹಕಾರ ಸಪ್ತಾಹ ಕಾರ್ಯಕ್ರಮ ಆಚರಿಸಲಾಯಿತು.

ಸಂಘದ ಅಧ್ಯಕ್ಷ ಮಂಜುನಾಥ ಬಿಲಕೇರಿ ಸಹಕಾರ ಧ್ವಜಾರೋಹಣ ನೆರವೇರಿಸಿದರು. ನಿರ್ದೇಶಕರುಗಳಾದ ಬಸಪ್ಪ ಶಿವನಿಚ್ಚಿ, ಮಂಜುನಾಥ ಗಾಣಿಗೇರ,

ಬಸವರಾಜ ಪುಂಡಿಕಟ್ಟಿಗೆ, ಆನಂದ ಅರಕೇರಿ, ಸದು ಸಣ್ಣಕ್ಕಿ, ಮಳಿಯಪ್ಪ ಅಡಗಲ್, ಎಂ.ಎಚ್.ನದಾಫ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಸವಂತಪ್ಪ ಶೆಟ್ಟಪ್ಪನವರ ಹಾಗೂ ಸಿಬ್ಬಂದಿ ಇದ್ದರು.

# ಮೆಡಿಕಲ್ ಕಾಲೇಜಿನಲ್ಲಿ ಮಕ್ಕಳ ದಿನಾಚರಣೆ
## ಭವಿಷ್ಯದ ಭಾರತಕ್ಕೆ ಆರೋಗ್ಯವಂತ ಮಕ್ಕಳ ಅಗತ್ಯವಿದೆ

**ಮಲ್ಲಮ್ಮ ನುಡಿ ವಾರ್ತೆ**

**ಬಾಗಲಕೋಟೆ: ನ** ಇಂದಿನ ಮಕ್ಕಳು ಭವಿಷ್ಯದ ನಾಗರಿಕರು ಎನ್ನುವುದನ್ನು ಪುಷ್ಟೀಕರಿಸಲು ಮಕ್ಕಳ ಆರೋಗ್ಯಕ್ಕೆ ಹೆಚ್ಚು ಆದ್ಯತೆ ನೀಡಬೇಕಾಗಿದೆ. ಉತ್ತಮ ಶಿಕ್ಷಣದ ಜೊತೆಗೆ ಮಕ್ಕಳಿಗೆ ಅತ್ಯುತ್ತಮ ಆರೋಗ್ಯವನ್ನು ಕೂಡ ಒದಗಿಸಬೇಕಾಗಿದೆ ಎಂದು ಬಿ.ವಿ.ವಿ ಸಂಘದ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ) ಅಭಿಪ್ರಾಯಪಟ್ಟರು.

ನಗರದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಚಿಕ್ಕಮಕ್ಕಳ ವಿಭಾಗದಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಿಗೆ ಸಿಹಿ ಮತ್ತು ಹಣ್ಣು ವಿತರಿಸಿ ಮಾತನಾಡಿದ ಅವರು, ಭವಿಷ್ಯದ ಬಲಿಷ್ಠ ಭಾರತಕ್ಕಾಗಿ ಆರೋಗ್ಯವಂತ ಮಕ್ಕಳ ಅಗತ್ಯವಿದೆ ಎಂದರು.

ಕುಮಾರೇಶ್ವರ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗ ಅತ್ಯುತ್ತಮ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದೆ. ಚಿಕ್ಕಮಕ್ಕಳ ತಜ್ಞವೈದ್ಯರು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಮಕ್ಕಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಅಗತ್ಯದ ಎಲ್ಲ ಪ್ರಕಾರದ ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗಿದೆ. ಥಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಲು ಕುಮಾರೇಶ್ವರ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದಲ್ಲಿ ಥಲಸ್ಸೇಮಿಯಾ ಮತ್ತು ಹಿಮೋಫಿಲಿಯಾ ಸೊಸೈಟಿಯನ್ನು ಸ್ಥಾಪಿಸಲಾಗಿದೆ. ಈ ಸೊಸೈಟಿಗೆ




2022 ರಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ ಎಂದು ಸಜ್ಜನ ಹೇಳಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಅಶೋಕ ಬಡಕಲಿ, ಚಿಕ್ಕಮಕ್ಕಳ ತಜ್ಞವೈದ್ಯರಾದ ಡಾ.ರಮೇಶ ಪೋಳ, ಡಾ.ತಳವಾರ, ಡಾ.ವಿನಯಕುಮಾರ, ಡಾ.ರಮೇಶ ನೀಲನ್ನವರ, ಡಾ.ಪ್ರವೀಣ, ಡಾ.ಮನೋಜ, ಡಾ.ಅನೀತಾ, ವೈದ್ಯಕೀಯ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು.

# ಶಿರೂರಿನಲ್ಲಿ ಸಹಕಾರ ಸಪ್ತಾಹ ಆಚರಣೆ



**ಮಲ್ಲಮ್ಮ ನುಡಿ ವಾರ್ತೆ**

**ಬಾಗಲಕೋಟೆ,ನ.14:** ತಾಲೂಕಿನ ಶಿರೂರ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ 72ನೇಯ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಶುಕ್ರವಾರ ಆಚರಿಸಲಾಯಿತು.

ಸಹಕಾರಿ ಸಂಘಗಳ ಸಂಸ್ಥಾಪಕ ದಿ.ಸಿದ್ದನಗೌಡ ಪಾಟೀಲ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಹಕಾರಿ ಧ್ವಜರೋಹಣ ನೆರವೇರಿಸಿದ ಸಂಘದ ಅಧ್ಯಕ್ಷ ಸಿದ್ದಪ್ಪ ಹಂಡರಗಲ್ಲ, ದಿ.ಸಿದ್ದನಗೌಡರು ರೈತಾಪಿ ಜನರ ಅನುಕೂಲಕ್ಕಾಗಿ ಸಹಕಾರ ಸಂಘ ರಚನೆ ಮಾಡಿದ್ದು, ಅವರ ಪರಿಶ್ರಮದ ಫಲವಾಗಿ ಇಂದು ರೈತಾಪಿ ವರ್ಗಕ್ಕೆ ಪಿಕೆಪಿಎಸ್ ಗಳಿಂದ ಅನೇಕ ಯೋಜನೆಗಳು ದೊರೆಯುತ್ತಿವೆ ಎಂದರು. ಉಪಾಧ್ಯಕ್ಷ ಭೀಮಪ್ಪ ದಾಸಪ್ಪನ್ನವರ, ಸದಸ್ಯರಾದ ಕುಮಾರ ನಡುವಿನಮನಿ, ಮುದುಕಪ್ಪ ಬಿಲ್ಲಾರ, ಮಳಿಯಪ್ಪ ಮುದಗಲ್ಲ, ಮುದುಕಪ್ಪ ಆಡಿನ, ಶಿವಪುತ್ರಪ್ಪ ಕಟ್ಟಿಮನಿ, ಪಾರವ್ವ ನೆರಕಿ, ಕಾರ್ಯದರ್ಶಿ ಹನಮಂತ ಬಾರಡ್ಡಿ, ಮಹಾಂತೇಶ ನರೇಗಲ್ಲ, ಈರಣ್ಣ ಬ್ಯಾಳಿ, ಗಂಗಪ್ಪ ಗುಲಗಂಜಿ, ಸಿದ್ದಪ್ಪ ಜಡ್ರಾಮಕುಂಟಿ ಹಾಗೂ ರೈತರು, ಸಿಬ್ಬಂದಿ ವರ್ಗ ಇದ್ದರು.

# ಬೀದಿನಾಯಿಗಳ ನಿಯಂತ್ರಣ, ಸ್ಥಳಾಂತರಕ್ಕೆ ಕ್ರಮ

**ಮಲ್ಲಮ್ಮ ನುಡಿ ವಾರ್ತೆ**

**ಬಾಗಲಕೋಟೆ: ನ** ಸರ್ವೋಚ್ಚ ನ್ಯಾಯಾಲಯ(ಸ್ವಯಂಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ) ನೀಡಿರುವ ನಿರ್ದೇಶನದಂತೆ ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳ ಮುಖ್ಯಸ್ಥರಿಗೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಸಂಖ್ಯೆಯನ್ನು ಲೆಕ್ಕ ಮಾಡಿ ಪೌರಾಯುಕ್ತರಿಗೆ ನೀಡುವಂತೆ ತಿಳಿಸಲಾಗಿದೆ.

ತಮ್ಮ ಸಂಸ್ಥೆಗಳ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮ, ಬೀದಿ ನಾಯಿಗಳ ನಿಯಂತ್ರಣ ಮತ್ತು ಸ್ಥಳಾಂತರಿಸಲು ಸಹಕರಿಸಲು ಸಂಸ್ಥೆಯಿಂದ ಒಬ್ಬ ನೋಡಲ್ ಅಧಿಕಾರಿಯ ನೇಮಕ ಮಾಡತಕ್ಕದ್ದು, ಸಂಸ್ಥೆ ವ್ಯಾಪ್ತಿಯಲ್ಲಿ ಪುನಃ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವುಗಳನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಗಳಿಂದಲೇ ವಸೂಲಿ ಮಾಡಲಾಗುವುದು ಎಂದು ತಿಳಿಸಿರುವ ಪೌರಾಯುಕ್ತರು, ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘಿಸಿದಲ್ಲಿ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು ಎಂದು ಬಾಗಲಕೋಟೆ ನಗರಸಭೆ ಪೌರಾಯುಕ್ತರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಮೋದಿ ನಾಯಕತ್ವಕ್ಕೆ ಮನ್ನಣೆ: ಶಾಸಕ ಚವ್ಹಾಣ

**ಮಲ್ಲಮ್ಮ ನುಡಿ ವಾರ್ತೆ**

**ಬಸವಕಲ್ಯಾಣ: ನ.** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಅಭೂತಪೂರ್ವ ಗೆಲುವು ನೀಡುವ ಮೂಲಕ ಜನತೆ ಪ್ರಧಾನಿ ನರೇಂದ್ರ ಮೋದಿಯವರ ಸಮರ್ಥ ನಾಯಕತ್ವಕ್ಕೆ ಮನ್ನಣೆ ನೀಡಿದ್ದಾರೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪ್ರಧಾನಿಯವರು ಸಮೃದ್ಧ ಭಾರತ ನಿರ್ಮಾಣಕ್ಕಾಗಿ ಹಗಲಿರುಳು ದುಡಿಯುತ್ತಿದ್ದು,

ಅವರ ಮುಂದಾಳತ್ವದಲ್ಲಿ ದೇಶ ಸಾಕಷ್ಟು ಪ್ರಗತಿ ಸಾಧಿಸಿದೆ. ಎಲ್ಲರ ಏಳಿಗೆಯ ಚಿಂತನೆಯೊಂದಿಗೆ ಕೆಲಸ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ನಿತೀಶಕುಮಾರ ಅವರ ಆಡಳಿತವನ್ನು ಬಿಹಾರದ ಜನತೆ ಮೆಚ್ಚಿಕೊಂಡಿದ್ದು, ಎನ್‌ಡಿಎ ಮೈತ್ರಿಕೂಟಕ್ಕೆ ನಿರೀಕ್ಷೆ ಮೀರಿದ ದಾಖಲೆಯ ಬಹುಮತದಿಂದ ಗೆಲ್ಲಿಸಿ ಆಶೀರ್ವದಿಸಿದ್ದಾರೆ ಎಂದಿದ್ದಾರೆ

ತುಷ್ಟೀಕರಣದ ರಾಜಕೀಯ ಮಾಡಿದ ಕಾಂಗ್ರೆಸ್‌ಗೆ, ಒಂದು ಧರ್ಮದ ಜನರನ್ನು ಓಲೈಸುವ ಕೆಲಸ ಮಾಡಿದವರಿಗೆ ಮತದಾರರು ಪಾಠ ಕಲಿಸಿದ್ದಾರೆ. ಓಟ್ ಚೋರಿ ಎಂಬ ಸುಳ್ಳು ಅಭಿಯಾನವನ್ನು ನಡೆಸಿ ಜನರ ದಾರಿ ತಪ್ಪಿಸಲು ಯತ್ನಿಸಿದ್ದ ರಾಹುಲ್ ಗಾಂಧಿಯವರನ್ನು ಬಿಹಾರದ ಜನತೆ ಧಿಕ್ಕರಿಸಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಪಪ್ರಚಾರ ನಡೆಯುವುದಿಲ್ಲ, ಅಲ್ಪಸಂಖ್ಯಾತರ ಹೆಸರಿನಲ್ಲಿ ಓಲೈಕೆಯ ಮತಬ್ಯಾಂಕ್ ರಾಜಕಾರಣಕ್ಕೆ ಭವಿಷ್ಯವಿಲ್ಲ ಎನ್ನುವುದನ್ನು ಬಿಹಾರದ ಜನತೆ ತೋರಿಸಿಕೊಟ್ಟಿದ್ದಾರೆ.

# ಮಕ್ಕಳ ದಿನಾಚರಣೆ ಕಾರ್ಯಕ್ರಮ
## ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪೋಷಕರ ಬಹುಮುಖ್ಯ ಪಾತ್ರ: ಸುಲ್ಪಿ

**ಮಲ್ಲಮ್ಮ ನುಡಿ ವಾರ್ತೆ**

**ಬಸವಕಲ್ಯಾಣ: ನ.** ಮಕ್ಕಳ ಉಜ್ವಲ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಜೊತೆಗೆ ಪೋಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ರಮೇಶ ಸುಲ್ಪಿ ಹೇಳಿದರು.

ನಗರದ ಶಾಂತಿನಿಕೇತನ ಶಿಕ್ಷಣ ಸಂಸ್ಥೆಯಲ್ಲಿ ಶುಕ್ರವಾರ ಹಮ್ಮಿಕೊಂಡ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಶಾಲೆಯಲ್ಲಿ ಕಲಿಸುವ ಆಟ–ಪಾಠಗಳ ಬಗ್ಗೆ ಮಕ್ಕಳು ಮನೆಗೆ ಬಂದಾಗ ಪೋಷಕರು ವಿಚಾರಿಸಬೇಕು ಮತ್ತು ಅವರ ಚಲನ ವಲನ ಗಳ ಬಗ್ಗೆ ನಿವಾ ವಹಿಸಬೇಕು ಎಂದರು.

ವಿದ್ಯಾರ್ಥಿಗಳು ನೀವು ಓದುವ ಕೋಣೆಯಲ್ಲಿ ಮೊಬೈಲ್ ಮತ್ತು ಟಿವಿ ಉಪಯೋಗ ಮಾಡದೆ ಕೇವಲ ಪುಸ್ತಕ ಮಾತ್ರ ಸಂಗ್ರಹ ಮಾಡಿಟ್ಟುಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಮತ್ತು ಪ್ರತಿಯೊಬ್ಬರು ಉನ್ನತವಾದ ಕನಸುಗಳನ್ನು ಇಟ್ಟಿಕೊಂಡು ಅದಕ್ಕೆ ತಕ್ಕಂತೆ ಶ್ರಮ ಪಡಬೇಕು. ಅಂದಾಗ ಮಾತ್ರ ನಿಮ್ಮ ಜೀವನದ ಯಶಸ್ವಿ ದಡ ಸೇರಲು ಸಾಧ್ಯ ಎಂದರು.

ನಂತರ ಮಕ್ಕಳ ದಿನಾಚರಣೆ ಅಂಗವಾಗಿ ಶಾಲೆಯಲ್ಲಿ ಏರ್ಪಡಿಸಿದ ವಿವಿಧ ಸ್ಪರ್ದೆಗಳಲ್ಲಿ ಗೆಲವು ಸಾಧಿಸಿದ ಮತ್ತು ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಇಒ ರಮೇಶ ಸುಲ್ಪಿ ಅವರು ವಯಕ್ತಿಕವಾಗಿ ಬಹುಮಾನಗಳು ವಿತರಿಸಿದರು.

ಈ ಸಂದರ್ಭದಲ್ಲಿ ಸಿಆರ್‌ಪಿ ನಾಸೀರ ಪಟೇಲ್, ಪ್ರೌಢ ಶಾಲೆಯ ಮುಖ್ಯಗುರು ಚನ್ನವೀರ ಬಿರಾದಾರ್, ಪ್ರಾಥಮಿಕ ಶಾಲೆಯ ಮುಖ್ಯಗುರು ಶಿವರಾಜ ಖೇಲೆ ಹಾಗೂ ಐಇಸಿ ಸಂಯೋಜಕ ವೀರಾರೆಡ್ಡಿ ಸೇರಿದಂತೆ ಸಿಬ್ಬಂದಿ ಇದ್ದರು. ರೇಖಾ ಬೇಲೂರೆ




ಸ್ವಾಗತಿಸಿದರು. ಮಲ್ಕಣ್ಣಾ ಮಸೂಟಿ ನಿರೂಪಿಸಿದರು. ಅಮರ ರಾಜಪೂತ ವಂದಿಸಿದರು.ಬಸವಕಲ್ಯಾಣ:ನಗರದ ಶಾಂತಿನಿಕೇತನ ಶಾಲೆಯಲ್ಲಿ ಹಮ್ಮಿಕೊಂಡ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ತಾ.ಪಂ.ಕಾ.ನಿ.ಅ.ರಮೇಶ ಸುಲ್ಪಿ ಅವರು ವಿದ್ಯಾರ್ಥಿಗಳಿಗೆ ವಯಕ್ತಿಕವಾಗಿ ಬಹುಮಾನ ವಿತರಣೆ ಮಾಡಿದರು. ಶಾಲೆಯ ಸಿಬ್ಬಂದಿಗಳು ಇದ್ದರು.

# ಕಲಬುರಗಿ ಮಾದರಿಯಂತೆ ಬೀದರ್ ರೈತರಿಗೆ 3200 ಬೆಲೆ ನಿಗದಿ ಮಾಡಿ: ಪಾಟೀಲ

**ಮಲ್ಲಮ್ಮ ನುಡಿ ವಾರ್ತೆ**

**ಬೀದರ್: ನ.** ಕಲಬುರಗಿ ಜಿಲ್ಲೆಯ ಕಬ್ಬು ಪುರೈಸಿದ ರೈತರಿಗೆ ಪ್ರತಿ ಟನ್‌ಗೆ 3,172 ನೀಡಲು ಅಲ್ಲಿಯ ಜಿಲ್ಲಾಡಳಿತ ಮುಂದಾಗಿದ್ದು, ಬೀದರ್ ಜಿಲ್ಲಾಡಳಿತವು ಸಹ ಪ್ರತಿ ಟನ್‌ಗೆ 3,200 ನಿಗದಿಗೊಳಿಸಬೇಕೆಂದು ಭಾರತೀಯ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಪಕ್ಕದ ಕಲಬುರಗಿ ಜಿಲ್ಲೆಯಲ್ಲಿ ರು.3,172 ನೀಡಲು ಮುಂದೆ ಬಂದಿರುವಾಗ ಇಲ್ಲಿ ಏಕೆ ಸಾಧ್ಯವಿಲ್ಲ? ಈಗಾಗಲೇ ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಬೆಳಗಾವಿಗೆ ಒಂದು ಬಾಗಲಕೋಟೆಗೆ ಒಂದು ಕಾನೂನು ಇರುವುದಿಲ್ಲ ಎಂದು ಹೇಳಿದ್ದಾರೆ. ಹೀಗಿರುವಾಗ ಕಲಬುರಗಿ ಹಾಗೂ ಬೀದರ್‌ಗೆ ಪ್ರತ್ಯೇಕ ದರವೇಕೆ? ಎಂದು ಪ್ರಶ್ನೆ ಮಾಡಿದರು.

ಮಹಾರಾಷ್ಟ್ರದಲ್ಲಿ ಈಗಾಗಲೇ ಪ್ರತಿ ಹೆಕ್ಟೇರ್‌ಗೆ 48,000 ನೀಡಿದ್ದು, ರಾಜ್ಯದಲ್ಲಿ ಕೇವಲ 17,000 ನೀಡಲು ಮುಂದಾಗಿದೆ. ಈಗ ಕೇವಲ 8,500 ನೀಡಿದ್ದು, ಉಳಿದ ಹಣ ಯಾವಾಗ ಬರುತ್ತೊ ಕಾದು ನೋಡಬೇಕಿದೆ ಎಂದು ವ್ಯಂಗ್ಯವಾಡಿದರು.

ಈಗಾಗಲೆ ಉತ್ತರ ಕರ್ನಾಟಕದ ಸಂಕಷ್ಟದಲ್ಲಿದ್ದಾನೆ. ರಾಜ್ಯದಲ್ಲಿ ಪೋಲಿಸ್ ಸ್ಟೇಷನ್‌ಗಳು ಕಾಂಗ್ರೆಸ್ ಕಚೇರಿಗಳಾಗಿ, ಪೋಲಿಸ್‌ರು ಕಾಂಗ್ರೆಸ್ ಏಜೆಮಟ್‌ಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿಭಟನಾಕಾರರನ್ನು ಹತ್ತಿಕ್ಕಲು ಸರ್ಕರದ ತಾಳಕ್ಕೆ ಹೆಜ್ಜೆ ಹಾಕುತ್ತಿರುವುದು ಪ್ರಜಾಪ್ರಭುತ್ವದಕ್ಕೆ ಮಾರಕ. ಇತ್ತಿಚೀಗೆ ಹುಮನಾಬಾದ್‌ನಲ್ಲಿ ರೈತರೊಂದಿಗೆ ಸೇರಿ ಹೋರಾಟಕ್ಕೀದ ನಮ್ಮವರನ್ನು ಹಾಗೂ ರೈತರನ್ನು ಬಂಧಿಸಿ, ನಮ್ಮ ಕೈಯಲ್ಲಿದ್ದ ಫಲಕಗಳನ್ನು ಕಸಿದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಶ್ವರ ಬಿ. ಖಂಡ್ರೆಯವರು ಭಾಲ್ಕಿ ಉಸ್ತುವಾರಿ ಸಚಿವರಾ? ಅಥವಾ ಬೀದರ್ ಜಿಲ್ಲೆಯ ಉಸ್ತುವಾರಿಗಳಾ? ಭಾಲ್ಕಿ ತಾಲ್ಲೂಕಿನ ಎಲ್ಲಾ ರೈತರ ಖಾತೆಗೆ ಅತಿವೃಷ್ಟಿ ಪರಿಹಾರದ ಹಣ ಜಮೆಯಾಗಿದೆ. ಆದರೆ, ಜಿಲ್ಲೆಯ ಹುಮನಾಬಾದ್, ಬೀದರ್, ಬಸವಕಲ್ಯಾಣ ಸೇರಿದಂತೆ ಇತರೆ ತಾಲ್ಲೂಕುಗಳ ರೈತರಿಗೆ ಪರಿಹಾರ ನೀಡಿಲ್ಲ' ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಹೇಳಿದರು.

ಹಂತ ಹಂತವಾಗಿ ಪರಿಹಾರ ರೈತರ ಖಾತೆಗೆ ಜಮೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದ್ದಾರೆ. ಆದರೆ, ಹಂತ ಹಂತವಾಗಿ ಏಕೆ ಕೊಡಬೇಕು. ಒಂದೇ ಸಲ ಕೊಡಲು ಏನು ಕಷ್ಟ? ಕೇಂದ್ರ ಸರ್ಕಾರ ಇಡೀ ದೇಶದ ರೈತರಿಗೆ ಒಂದೇ ಸಲ ಹಣ ಪಾವತಿಸುವುದಿಲ್ಲವೇ? ರೈತರು ರೊಚ್ಚಿಗೆದ್ದರೆ ಯಾವ ಸರ್ಕಾರವೂ ಉಳಿಯುವುದಿಲ್ಲ ಎಂದರು.




ಕೆಂಪುಕೋಟೆ ಸಮೀಪ ನಡೆದ ಉಗ್ರರ ದಾಳಿಯಲ್ಲಿ ಅನೇಕರು ಸಾವನ್ನಪ್ಪಿರುವ ಕಾರಣ ಈ ಸಲ ಬಿಜೆಪಿ ಬಿಹಾರ ಚುನಾವಣೆಯಲ್ಲಿ ಗೆದ್ದರೂ ವಿಜಯೋತ್ಸವ ಆಚರಿಸದಿರಲು ನಿರ್ಧರಿಸಿದೆ ಎಂದರು.ಪೋಲಿಸ್‌ರ ಎದುರೆ ರೈತರನ್ನು ಥಳಿಸಿದ ಕಾಂಗ್ರೆಸ್ ಕಾರ್ಯಕರ್ತನ ಗುಂಡಾಗಿರಿ ಖೇದನಿಯ: ಸಿದ್ದು ಪಾಟೀಲ

ಬೀದರ್: ಹುಮನಾಬಾದ್ ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ್ ಮಾತನಾಡಿ, ಕಬ್ಬಿಗೆ ಬೆಂಬಲ ಬೆಲೆ ನಿಗದಿಪಡಿಸಬೇಕೆಂದು ಆಗ್ರಹಿಸಿ ರೈತರು ಹುಮನಾಬಾದ್‌ನಲ್ಲಿ ನ. 12ರಂದು ರಾಷ್ಟ್ರೀಯ ಹೆದ್ದಾರಿ ತಡೆ ಹೋರಾಟ ಇಟ್ಟುಕೊಂಡಿದ್ದರು. ಮೂರು ದಿನಗಳ ಮುಂಚೆಯೇ ಬಿಜೆಪಿ ಈ ಹೋರಾಟವನ್ನು ಬೆಂಬಲಿಸಿ, ಅದರಲ್ಲಿ ಪಾಲ್ಗೊಳ್ಳುವುದಾಗಿ ಹೇಳಿತ್ತು. ಆನಂತರ ಇತರೆ ಪಕ್ಷಗಳು ಕೂಡ ಬೆಂಬಲ ಸೂಚಿಸಿದವು. ಆದರೆ, ನ. 12ರಂದು ಹೋರಾಟ ನಡೆಸುವಾಗ ನನ್ನ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷರನ್ನು ಪೊಲೀಸರು ಬಂಧಿಸಿ, ಬೇ–ರೆಡೆ ಕರೆದೊಯ್ದರು. ಆದರೆ, ಆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಮುಖಂಡರೂ ಆದ ಮಾಜಿ ಸಚಿವ ರಾಜಶೇಖರ್ ಪಾಟೀಲ್ ಹುಮನಾಬಾದ್, ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್ ಅವರನ್ನು ಪೊಲೀಸರು ಬಂಧಿಸಲಿಲ್ಲ ಎಂದರು.

ರಾಜ್ಯ ಸರ್ಕಾರ ಮಲಗಿದೆ. ಸರ್ಕಾರ ರೈತರ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ಮುಖಂಡರು ಆ ಪ್ರತಿಭಟನೆಯಲ್ಲಿ ಭಾಗವಹಿಸಿ ತೋರಿಸಿಕೊಟ್ಟಿದ್ದಾರೆ. ವಿರೋಧ ಪಕ್ಷವಾಗಿ ಬಿಜೆಪಿಯವರಾದ ನಾವು ಸರ್ಕಾರದ ವಿರುದ್ಧದ ಈ ಹೋರಾಟದಲ್ಲಿ ಪಾಲ್ಗೊಂಡಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರೆ ಸಚಿವರ ಭಾವಚಿತ್ರಗಳನ್ನು ಹಿಡಿದು ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದೆವು. ಆದರೆ, ಪೊಲೀಸರು ನಮ್ಮ ಬಳಿಯಿದ್ದ ಭಾವಚಿತ್ರಗಳನ್ನು ಕಸಿದುಕೊಂಡು ಹರಿದು ಹಾಕಿದರು. ಬಳಿಕ ನಮ್ಮನ್ನು ಬಂಧಿಸಿ ಬೇರೆಡೆ ಕರೆದೊಯ್ದರು. ಅದೇ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಮುಖಂಡರನ್ನು ಬಂಧಿಸಿಲ್ಲವೇಕೆ? ಎಂದು ಪ್ರಶ್ನಿಸಿದರು.

ಹುಮನಾಬಾದ್‌ನಲ್ಲಿ ಪೊಲೀಸರ ಕಸ್ಟಡಿಯಲ್ಲಿದ್ದ ಹೋರಾಟಗಾರರ ಮೇಲೆ ಯುವ ಕಾಂಗ್ರೆಸ್ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ. ಇದೆಲ್ಲ ಪೊಲೀಸರ ಸಮ್ಮುಖದಲ್ಲೇ ನಡೆದಿದೆ. ಭೀಮರಾವ್ ಪಾಟೀಲ್ ಕೂಡ ಅಲ್ಲೇ ಇದ್ದರು. ಇದು ಪೊಲೀಸರ ವೈಫಲ್ಯ ಅಲ್ಲವೇ? ಇದಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ಎಸ್ಪಿ ಹಾಗೂ ಡಿವೈಎಸ್ಪಿ ಅವರೊಂದಿಗೆ ಹಂಚಿಕೊಂಡು ಸ್ವಯಂಪ್ರೇರಿತ ಪ್ರಕರಣ ದಾಖಲಿಸಬೇಕೆಂದು ಹೇಳಿದ್ದೆ. ಆದರೆ, ಇದುವರೆಗೆ ಆ ಕೆಲಸ ಮಾಡಿಲ್ಲ. ಇದರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ರೈತರ ಹೋರಾಟದ ಮುನ್ನ ದಿನ ಪಿಎಸ್‌ಐ ನನ್ನ ಬಳಿ ಬಂದು ರಾಷ್ಟ್ರೀಯ ಹೆದ್ದಾರಿಯಲ್ಲಿ 10 ನಿಮಿಷ ಪ್ರತಿಭಟನೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದ್ದರು. ಮರುದಿನ ಇದೇ ಪೊಲೀಸರು, ಹೆದ್ದಾರಿಯಲ್ಲಿ ಪ್ರತಿಭಟನೆಗೆ ಅವಕಾಶ ಕಲ್ಪಿಸುವುದಿಲ್ಲ ಎಂದರು. ಇದರಿಂದ ಗೊಂದಲ ಸೃಷ್ಟಿಯಾಯಿತು ಎಂದು ಆರೋಪಿಸಿದರು. ನನ್ನ ಹುಮನಾಬಾದ್ ಮತಕ್ಷೇತ್ರವು ಬೀದರ್ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಹಂಚಿಹೋಗಿದೆ. ನನ್ನ ಕ್ಷೇತ್ರದ ಕೆಲವು ಹಳ್ಳಿಗಳ ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ ಕಲಬುರಗಿಯಲ್ಲಿ ₹3,172 ಬೆಲೆ ಸಿಗುತ್ತಿದೆ. ಬೀದರ್ ಜಿಲ್ಲೆಯ ಹಳ್ಳಿಗಳಿಗೆ ಕಡಿಮೆ ಕೊಟ್ಟರೆ ಹೇಗೆ? ಕಲಬುರಗಿಯಂತೆ ದರ ನಿಗದಿಪಡಿಸಿ ರೈತರಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಕಬ್ಬು ಬೆಳೆಗಾರರ ಹೋರಾಟವನ್ನು ಬಿಜೆಪಿ ಪ್ರಚೋದಿಸುತ್ತಿದೆ ಎಂದು ಕಾಂಗ್ರೆಸ್ ಮುಖಂಡರು ಮಾಡಿರುವ ಆರೋಪ ಸತ್ಯಕ್ಕೆ ದೂರವಾದದ್ದು. ಏಕೆಂದರೆ ಇದು ಪಕ್ಷಾತೀತವಾದ ಹೋರಾಟವಾಗಿತ್ತು. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಇತರೆ ಪಕ್ಷದವರು ಭಾಗವಹಿಸಿದ್ದರು. ಮಾಜಿ ಸಚಿವ ರಾಜಶೇಖರ್ ಪಾಟೀಲ್ ಹುಮನಾಬಾದ್ ಕೂಡ ಪಾಲ್ಗೊಂಡಿದ್ದರು. ಇದಕ್ಕೆ ಕಾಂಗ್ರೆಸ್‌ನವರು ಏನು ಹೇಳುತ್ತಾರೆ? ಕಾಂಗ್ರೆಸ್‌ನ ಎಂಎಲ್‌ಸಿ ಭೀಮರಾವ್ ಪಾಟೀಲ್ ಅವರು ಬೆಲ್ಲದ ಕಾರ್ಖಾನೆ ಹೊಂದಿದ್ದಾರೆ. ಅವರಾದರೂ ಬೆಲೆ ಘೋಷಿಸಬಹುದಿತ್ತು. ಹಾಗೆ ಮಾಡಿಲ್ಲ. ಪ್ರತಿಭಟನೆಯಲ್ಲಿ ಭಾಗವಹಿಸಿ ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ. ಬಿಜೆಪಿಗೆ ಹೋರಾಟದ ಕ್ರೆಡಿಟ್ ಸಿಗುತ್ತದೆ ಎಂದು ಕಾಂಗ್ರೆಸ್ಸಿಗರು ದಿಕ್ಕು ತಪ್ಪಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ಬಿಎಸ್‌ಎಸ್‌ಕೆ) ಆರಂಭಿಸಲು ರಾಜ್ಯ ಸರ್ಕಾರಕ್ಕೆ ಇಚ್ಛಾಶಕ್ತಿ ಕೊರತೆ ಇದೆ. ರಾಜ್ಯ ಸರ್ಕಾರ ಗ್ಯಾರಂಟಿ ಕೊಟ್ಟರೆ ₹550 ಕೋಟಿ ಸಾಲ ಕೊಡಲಾಗುವುದು ಎಂದು ಕೇಂದ್ರದ ಎನ್‌ಸಿಡಿಸಿ ಹೇಳಿದೆ. ರಾಜ್ಯ ಸರ್ಕಾರ ಅದಕ್ಕಾದರೂ ಒಪ್ಪಿಕೊಳ್ಳಬೇಕು. ಇಲ್ಲವಾದರೆ ಟೆಂಡರ್ ಕರೆದು, ಆಸಕ್ತರಿಗೆ ಲೀಜ್ ಮೇಲೆ ಕೊಟ್ಟು ಕಾರ್ಖಾನೆ ಆರಂಭಿಸಬೇಕು ಎಂದು ಆಗ್ರಹಿಸಿದರು.

ಬಿಎಸ್‌ಎಸ್‌ಕೆ ಬೀದರ್ ಜಿಲ್ಲೆಯ ಜೀವನಾಡಿ. ಜಿಲ್ಲೆಯ ಮೊದಲ ಸಕ್ಕರೆ ಕಾರ್ಖಾನೆ. 25 ಸಾವಿರ ಷೇರುದಾರರು, 5 ಸಾವಿರ ಕಾರ್ಮಿಕರಿದ್ದಾರೆ. ಈ ಕಾರ್ಖಾನೆ ಆರಂಭಗೊಂಡರೆ ಜಿಲ್ಲೆಯ ರೈತರಿಗೆ ಅನುಕೂಲವಾಗುತ್ತದೆ. ಶೀಘ್ರ ಕಾರ್ಖಾನೆ ಆರಂಭಿಸಬೇಕು. ಇಲ್ಲವಾದಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಪ್ರಚಂಡ ಜಯಗಳಿಸಿದೆ. 'ವೋಟ್ ಚೋರಿ' ಎಂದು ಆರೋಪಿಸುತ್ತಿದ್ದವರಿಗೆ ಬಿಹಾರದ ಜನತೆ ತಕ್ಕ ಉತ್ತರ ನೀಡಿದ್ದಾರೆ. ಈಗ ಎಲ್ಲರೂ ಪ್ರಜ್ಞಾವಂತರಿದ್ದಾರೆ. 'ವೋಟ್ ಚೋರಿ', ಸಂವಿಧಾನದ ಪುಸ್ತಕ ಬಿಟ್ಟರೆ ರಾಹುಲ್ ಗಾಂಧಿಯವರ ಬಳಿ ಏನೂ ಇಲ್ಲ. ಸುಮ್ಮನೆ ಜನರಿಗೆ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಶಾಸಕ ಡಾ. ಸಿದ್ದಲಿಂಗಪ್ಪ ಪಾಟೀಲ್ ಹೇಳಿದರು.

ಬಿಜೆಪಿ ಮುಖಂಡರಾದ ವಿಶ್ವನಾಥ ಪಾಟೀಲ್ ಮಾಡಗುಳ, ಬಸವರಾಜ ಆರ್ಯ, ರಾಜಶೇಖರ್ ನಾಗಮೂರ್ತಿ, ಶ್ರೀನಿವಾಸ್ ಚೌಧರಿ, ಬಸವರಾಜ ಪವಾರ, ವೀರು ದಿಗ್ವಾಲ್, ಶಶಿಧರ ಹೊಸಳ್ಳಿ, ಅನಿಲ ಪಸರಗೆ ಹಾಜರಿದ್ದರು.

